ಮೈಸೂರ ಗೆಜೆಟ್.

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 11, ಸ್ಯ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೪ನೇ ಭಾಗ.

ಸರ್ಕಾರೀ ಕಾಗದ ಪತ್ರಗಳು.

ಮೈಸೂರು ದೇಶದಲ್ಲಿ ರೆವಿನ್ಯೂ ಆಫೀಸರ್‌ಗಳಿಗೂ ಜಮ್ಮಿ ಕಂದಾಯಕ್ಕೂ ಸಂಬಂಧಿಸಿದ ಕಾನೂ
ನನ್ನು ತಿದ್ದುಪಡಿ ಮಾಡುವದಕ್ಕೂ ದೃಢಪಡಿಸುವದಕ್ಕೂ ಹುಟ್ಟಿದ (1884ನೇ ಇಸವಿ ನೇ
ನಂಬರ್ ರೆಗ್ಯುಲೇಷನನ್ನು ಆಲೋಚಿಸುವದಕ್ಕೆ ನೇಮಿಸಲ್ಪಟ್ಟ—

ಸೆಲೆಕ್ಟ್ ಕಮ್ಮಿಟಿಯವರ ರಿಪೋರ್ಟು.

2. ಕಮ್ಮಿಟಿಯವರು, ತಮ್ಮ ರಿಪೋರ್ಟಿಗೆ ಮುಂದಾಗಿ ತಿಳಿಸುವದೇನಂದರೆ, ರೆಗ್ಯುಲೇಷನನ್ನು ಅವಗಾಹನಕ್ಕೆ ತರುವದಕ್ಕೆ ಮುಂಚೆ, ಮೈಸೂರು ದೇಶದ ಜುಡಿಷಿಯಲ್ ಮ ರೆವಿನ್ಯು ಮುಖ್ಯ ಅಧಿಕಾರಿಗಳ ಅಭಿಪ್ರಾಯಗಳನ್ನೂ ಮತ್ತು ಅನೇಕ ಆಫೀಸರುಗಳ ಮ ಇತರ ಮನು ಷ್ಯರ ಸಲಹೆಗಳನ್ನೂ ಸಹ ಕಮ್ಮಿಟಿಯವರು ಪಡೆದಿರುತ್ತಾರೆ. ಸದರೀ ಅಭಿಪ್ರಾಯಗಳು ಯಾರಿಂದ ಕೊಡಲ್ಪಟ್ಟದ್ದಾಗಿದ್ದರೂ ಸರಿಯೆ ಅವುಗಳಿಗೆ ಸಂಪೂರ್ಣವಾದ ನಿಗೆ ಕೊಟ್ಟರುವದಲ್ಲದೆ ಅನೇಕ ಸಂದರ್ಭಗಳಲ್ಲಿ ಅಭಿಪ್ರಾಯಗಳು ಅಂಗೀಕರಿಸಲ್ಪಟ್ಟಿರುತ್ತವೆ, ಮತ್ತು ಕೊ ಡಲ್ಪಟ್ಟ ಅಭಿಪ್ರಾಯಗಳು ಸಾಧಾರಣವಾಗಿ ವಿಶೇಷ ಉಪಯೋಗವಾಹವುಗಳಾಗಿ ತಿಳಿಯಲ್ಪಟ್ಟವೆ. ಈ ರೆಗ್ಯುಲೇಷನಿಗೆ ಆಧಾರವಾದ ನಂಬಿ ಕೆವುಳ್ಳ ಮತ್ತು ಅನುಭವವುಳ್ಳ ಮುಂಬೈ ರೆವಿನ್ಯು ಕೋಡಿನ ನಿಯಮಗಳು, ಮೈಸೂರು ದೇಶದ ವಿಶೇಷಸಂದರ್ಭಗಳು ಹಾಲೀ ಜಾರೀ ಯಲ್ಲಿರುವ ಕಾನೂನಿನಲ್ಲಿಯೂ ನಡವಳಿತದಲ್ಲಿಯೂ ಮತ್ತು ಹಿಡುವಳಿಪದ್ಧತಿಗಳಯಲ್ಲಿಯೂ ಅಡಗಿರುವದು ಎಷ್ಟರ ಮಟ್ಟಿಗೆ ಆವಶ್ಯಕವೊ ಅಷ್ಟರಮಟ್ಟಿಗೇನೆ ಬದಲಾಯಿಸಲ್ಪಟ್ಟಿರುತ್ತವೆ, ಅವುಗಳೂ ಪ್ರಾಯಶಃ ಮುಂಬೈ ೀಮೆಯ ಮಾಮೂಲ್ ಮುಂತಾದವುಗಳಿಗೆ ಸ್ವಲ್ಪಮಟ್ಟಿ ಗೇನೆ ವ್ಯತ್ಯಾಸವಾಗಿರುತ್ತವೆ. ಈ ರಿಪೋರ್ಟಿನೊಂದಿಗೆ ಕಳುಹಿಸಲ್ಪಡುವ ಮಸೂದಾ ಕೋಡಿನಲ್ಲಿ ಕಮ್ಮಿಟಿಯವರಿಂದ ಮಾಡೋಕ್ಕಾದ ಬದಲಾವಣೆಗಳು "ಅಕ್ಷರಕಃ" ಅಡಗಿರುತ್ತವೆ, ಕಮ್ಮಿಟಿಯವರು ಸಾಧ್ಯವಾದ ಮಟ್ಟಿಗೆ ಸಂಕ್ಷೇಪವಾಗಿ ತಾವ್ರ ಅಭಿಪ್ರಾಯಪಡುವ ಜಾಸ್ತೀ ಅಂಶಗಳು ಮ ಬದಲಾವಣೆಗಳನ್ನೂ ಇದರಡಿ ಕಾಣಿಸಿ ನಿದರ್ಶನ ಮಾಡುತ್ತಾರೆ.

1ನೇ ಅಧ್ಯಾಯ.

(ಅವತರಣಿಕೆ.)

3. ಅರ್ಥವಿವರಣೆಯ ಕಲಮಾದ 3ನೇ ಸೆಕ್ಷನಿನ 19ನೇ ಕ್ಲಾಜಿನ 4ನೇ ಪಬ್ಲಿಯಲ್ಲಿ "ಕೆಲವು ಮಟ್ಟಿಗೆ" ಯಂಬ ಮಾತಿನ ಆಜೆ "ಅಥವಾ ಕಾಯಂ ಕಂದಾಯಕ್ಕೆ" ಯಂಬ ಮಾತುಗಳನ್ನು ಕೇರಿಸುವದರಿಂದ ಸದರೀ ಕ್ಲಾಜು ಕಾಯಂಗುತ್ತಾ ಗ್ರಾಮಗಳಿಗೂ ಲಗಾವಾಗಬಹುದೆಂದು ಕಮ್ಮಿಟಿಯವರು ಅಭಿ ಪ್ರಾಯಪಡುತ್ತಾರೆ; ಇದರಿಂದ (20 ಮ 21)ನೇ ಕ್ಲಾಜುಗಳು ಬಿಟ್ಟುಬಿಡಬಹುದು.

ಸೆಕ್ಷನ್ 3.

ಅದೇಸೆಕ್ಷನಿನ (23)ನೇ ಕ್ಲಾಜಿನಲ್ಲಿ ಜುಲೈ ಯಂಬ ಮಾತಿಗೆ ಬದಲಾಗಿ ಮಾರ್ಚಿಯಂಬದಾಗಿ ಬದಲಾಯಿಸಲ್ಪಟ್ಟಿರುತ್ತೆ. ಮತ್ತು (26)ನೇ ಕ್ಲಾಜಿನಲ್ಲಿ "ಗ್ರಾಮ ಮುನ್ಸದಿ" ಯಂಬದರ ಅರ್ಥವಿವರಣೆಯು ಅನಾವಶ್ಯಕವಾಗಿರುವದರಿಂದ ಬಿಡಲ್ಪಟ್ಟಿದೆ, ಯಿದಲ್ಲದೆ ಈ ಆಕ್ಟೈರ್ ಕಲಂ ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನಲ್ಲಿ ನಮೂದಾಗಿರುವದಿಲ್ಲ.

IIನೇ ಅಧ್ಯಾಯ.

(ಮುಲ್ಕೀ ಆಫೀಸ್ದರರುಗಳ ಏರ್ಪಾಡು ಮತ್ತು ಅಧಿಕಾರಗಳು.)

4. ಕಮ್ಮಿಷನರಿನ ಅಧಿಕಾರಗಳನ್ನು ಬಂದು ಷೆಡ್ಯೂಲಿನಲ್ಲಿ ನಮೂದಿಸಲ್ಪಡಬೇಕಾದ ತೊಂದರೆಯನ್ನು ತಪ್ಪಿಸುವಪ್ಪರ ಮೇಟ್ಟಿಗೆ 4ನೇ ಸೆಕ್ಷನನ್ನು ಕಮ್ಮಿಟಿಯವರು ಬದಲಾಯಿಸುತ್ತಾರೆ.

ಸೆಕ್ಷನ್ 4.

ಮೈಸೂರು ದೇಶದಲ್ಲಿ ವಿಶೇಷತಃ ಉಂಟುಮಾಡಲ್ಪಟ್ಟಿರುವ ಸಬ್ ಡಿವೀಜನ್ನಿಗೂ ಮತ್ತು ಸಬ್ ಡಿವೀಜ್ ಆಫೀಸರಿಗೂ ಲಗಾವಾಗುವಂತೆಯೂ, ಸಬ್ ಡಿವೀಜ್ ಚಾರ್ಜಿನಲ್ಲಿರುವ ಒಬ್ಬ ಅಸಿಸ್ಟೆಂಟ್ ಕಮ್ಮಿಷನರಿಗು ಮತ್ತು ಡೆಪ್ಯುಟಿ ಕಮ್ಮಿಷನರಿಂದ ಗೊತ್ತಾದ ಕೆಲಸಗಳು ಹಂಗಾಮಿಯಾಗಿ ನೇಮಿಸಲ್ಪಟ್ಟಿರುವ ಸಾಧಾರಣವಾದ ಒಬ್ಬ ಅಸಿಸ್ಟೆಂಟ್ ಕಮ್ಮಿಷನರಿಗು ಇರುವ ವ್ಯತ್ಯಾಸವನ್ನು ತೋರಿಸುವದಕ್ಕೂ ಕೆಲವು ಅಂಶಗಳು 6, 7, 8 ವ 9ನೇ ಸೆಕ್ಷನ್ಗಳಿಗೆ ಕೀರಿಸಲ್ಪಡತಕ್ಕದ್ದೆಂದು ಸೂಚಿಸಲ್ಪಟ್ಟಿದೆ.

ಸೆಕ್ಷನ್ಗಳು 6, 7, 8 ವ 9.

5. ಗವರ್ನಮೆಂಟಿನವರು, ಖಂಡಿತವಾಗಿ ಅವಶ್ಯಕವೆಂದು ಯೋಚಿಸುವಪ್ಪ ಸಂಖೆವುಳ್ಳ ಲೆಖ್ಖಗಳು ಮಾತ್ರವೇ, ಪರಭಾರೆ ಮಾಡಲ್ಪಟ್ಟ ಗ್ರಾಮದ ಹಿಡುವಳಿದಾರನು ಇಡಬೇಕಾದ್ದನ್ನು ಹದ್ದು ಪಡಿಸುವದಕ್ಕೋಸ್ಕರ ಮುಖ್ಯವಾದ ಬದಲಾವಣೆಯು 17 (1)ನೇ ಸೆಕ್ಷನಿನಲ್ಲಿ ಸೂಚಿಸಲ್ಪಟ್ಟಿದೆ. ಸರ್ಕಾರ್ ಗ್ರಾಮಗಳಂತೆ ತಮಾಂ ಲೆಖ್ಖಗಳೂ ತಯಾರ್ಮಾಡಲ್ಪಡತಕ್ಕದ್ದೆಂದು ವಿಧಿಸುವದು ತಪ್ಪೆಂದು ಕಮ್ಮಿಟಿಯವರು ಭಾವಿಸುತ್ತಾರೆ ; ಮತ್ತು ಅಸಾಧಾರಣವಾದ ಸಂಗತಿಗಳಲ್ಲಿವಿನಾ, ಕೆಲವು ಫಾರಂಗಳಿಗೆ ಬೇಕಾದ ತಪಶೀಲ್ಗಳು ಪರಭಾರೆಯಾದ ಗ್ರಾಮಗಳಲ್ಲಿ ಇರುವದೇ ಇಲ್ಲವು. ಯಿದಲ್ಲದೆ ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನಲ್ಲಿ ಈ ಸೆಕ್ಷನು ನಮೂದಿರುವದಿಲ್ಲ ; ಮತ್ತು ಮದರಾಸ್ ಕೀಮೆಯಲ್ಲಿ, ಕಮ್ಮಿಟಿಯವರಿಂದ ಈಗ ಸೂಚಿಸಲ್ಪಟ್ಟಿರುವ ಬದಲಾವಣೆಯಂತೆಯೇ ನಡವಳಿತ ಯಿರುವದಾಗಿ ನಂಬಲ್ಪಟ್ಟಿದೆ.

ಸೆಕ್ಷನ್ 17 (1.)

6. ಸೆಕ್ಷನ್ 21ಕ್ಕೆ "ಕಮ್ಮಿಷನರ್" ಯಂಬ ಮಾತು, ಅವರವರುಗಳ ಲವಾಜಮೆಯ ತಮಾಂ ಮೆಂಬರುಗಳ ಮೊಕರರಾತಿ ವಿಷಯದಲ್ಲಿ ಅಧಿಕಾರ ಕೊಡಲ್ಪಟ್ಟ ಆಫೀಸರ್ಗಳೊಂದಿಗೆ ಕೀರಿಸಲ್ಪಟ್ಟಿರುತ್ತೆ, ಮತ್ತು "ಸರ್ವೆ ಡೆಪ್ಯುಟಿ ಸೂಪರ್ಟೆಂಡೆಂಟರು ವ ಸರ್ವೆ ಸೆಟಿಲ್ಮೆಂಟ್ ಆಫೀಸರ್" ಯಂಬ ಮಾತುಗಳು ಬಿಡಲ್ಪಟ್ಟಿರುತ್ತವೆ. ಗವರ್ನಮೆಂಟಿನವರು, ಇತರ ಆಫೀಸರ್ಗಳಿಗೂ ಅವರುಗಳ ಲವಾಜಮೆಯ ಮೆಂಬರುಗಳ ಮೊಕರರಾತಿಯ ಅಧಿಕಾರವನ್ನು ಕೊಡುವ ಬಗ್ಯೆ ಅವಕಾಶ ವುಂಟುಮಾಡುವದಕ್ಕೋಸ್ಕರ ಸದರೀ ಸೆಕ್ಷನಿಗೆ ಬಂದು ನಿಯಮವು ಕೀರಿಸಲ್ಪಟ್ಟಿರುತ್ತೆ. ಯಾತಕ್ಕಂದರೆ, ಸದರೀ ಸೆಕ್ಷನಿನಲ್ಲಿ ನಮೂದ್ಮಾಡಲ್ಪಡದಂಥಾ ಆಫೀಸರ್ಗಳ ಕುರಿತು, ಅಂಥಾ ಹಕ್ಕುದಾರಿಗಳು ಯಾ ಗೌರವವುಳ್ಳ ಅಧಿಕಾರ ಇವುಗಳ ವಿಷಯದಲ್ಲಿ ಕೀರ್ಮಾನಿಸುವಂತೆ ಗವರ್ನಮೆಂಟಿನವರು ಪ್ರಾಯಶಃ ಕೇಳಲ್ಪಡಬಹುದೆಂತ ಕಮ್ಮಿಟಿಯವರು ಊಹಿಸುತ್ತಾರೆ. 21ನೇ ಸೆಕ್ಷನಿನ ಯಿಡನೇ ಭಾಗವು ವಿಶೇಷವಾಗಿ ಬದಲಾಯಿಸಲ್ಪಟ್ಟಿರುತ್ತೆ, ಯಾಕಂದರೆ ಕೇಂದ್ರಾರ್ಗಳು ವ ಇತರ ತಾಲೂದಾರಿ ಉದ್ಯೋಗಸ್ಥರು ಹಾಲೀ ಸದರೀ ಸೆಕ್ಷನಿನಲ್ಲಿ ನಮೂದಿರುವದಿಲ್ಲವಾಗಿ ಅವರುಗಳಿಗೂ ಕಾರ್ಯ ವಿಧಿಸುವದಕ್ಕೋಸ್ಕರ ಕಮ್ಮಿಟಿಯವರು ಈ ರೀತಿ ಬದಲಾಯಿಸಿರುತ್ತಾರೆ.

ಸೆಕ್ಷನ್ 21.

IIIನೇ ಅಧ್ಯಾಯ.

(ಕೆಲವು ಮುಲ್ಕೀ ಆಫೀಸರ್ಗಳಿಂದ ಕೊಡಲ್ಪಡತಕ್ಕ ಜಾಮೀನನ್ನು ಮುಖ್ಯಸ್ಥರ ವ ಜಾಮೀರ್ದಾರರ ಜವಾಬ್ದಾರಿಯನ್ನು ಕುರಿತು.)

7. ಸೆಕ್ಷನ್ 23ರ 14ನೇ ಪಟ್ಟಿಯಲ್ಲಿ "ಮುಕ್ತಲಿಕೆ ಮೂಲಕ" ಯಂಬ ಮಾತು ಅರ್ಥ ಸ್ಪಷ್ಟ ಪಡಿಸುವದಕ್ಕೋಸ್ಕರ ಕೀರಿಸಲ್ಪಟ್ಟಿರುತ್ತೆ.

ಸೆಕ್ಷನ್ 23.

8. ಸೆಕ್ಷನ್ 24ರ ವಿಷಯದಲ್ಲಿ ಕಮ್ಮಿಟಿಯವರು ಅಭಿಪ್ರಾಯ ಪಡುವದೇನಂದರೆ, ಒಬ್ಬ ರೆವಿನ್ಯು ಆಫೀಸರನು ಹೊಸದಾದ ಅಥವಾ ಜಾಸ್ತೀ ಜಾಮೀನನ್ನು ಕೊಡಲಿಕ್ಕೆ ವಿಧಿಸಿರುವ ಒಂದು ತಿಂಗಳ ಕಾಲವು ಸಾಲದ್ದಾಗಿರುವದರಿಂದ ಸದರೀ ಒಂದು ತಿಂಗಳ ಕಾಲವು ಕೇವಲ ಕಮ್ಮಿ ನಾಯಿದೆಯಾಗಿ ಬದಲಾಯಿಸಲ್ಪಡತಕ್ಕದ್ದು. ಸದರೀ ನಾಯಿದೆಯನ್ನು ಜಾಸ್ತೀ ಮಾಡುವದು ಡೆಪ್ಯುಟೆ ಕಮ್ಮಿಷನರ್ ಯಾ ಸರ್ವೆ ಸೂಪರ್‌ಟೆಂಡೆಂಟ್‌ಯವರ ಯಖ್ತ್ಯಾರಿಗೆ ಬಿಡಲ್ಪಟ್ಟಿರುತ್ತೆ.

ಸೆಕ್ಷನ್ 24.

9. ಸೆಕ್ಷನ್ 25ರ ಯರಡನೇ ಪ್ಯಾರಾವಿನ 4ನೇ ಪಚ್ತಿಯಲ್ಲಿ "ತಪ್ಪಿಸದೆಯಾಗಲಿ ಇದ್ದರೆ" ಎಂಬ ಮಾತಿನ ಆಚೆ "ಅಥವಾ ಹಾಗೆ ಮಾಡಲು ತಪ್ಪಿದ್ದಕ್ಕೆ ಸಾಕಾದ ಕಾರಣವನ್ನು ತೋರಿಸದಿದ್ದರೆ" ಯಂಬ ಮಾತುಗಳು ಸೇರಿಸುವದರಿಂದ ಕಾಣತ್ವ ಕಮ್ಮಿಯಾಗುವದು.

ಸೆಕ್ಷನ್ 25.

10. ಸೆಕ್ಷನ್ 26ರಲ್ಲಿ ನಮೂದ್ಮಾಡಿದ ತರಹೇದ ಸ್ವತ್ತುಗಳು ಹಜಂ ಮಾಡಲ್ಪಟ್ಟ ಸ್ಥಳವನ್ನು ತಿಳಿದಿರುವ ಪ್ರತಿ ಮನುಷ್ಯನೂ, ಆ ಸಂಗತಿಯನ್ನು ಕುರಿತ ವರ್ತಮಾನವನ್ನು ಡೆಪ್ಯುಟೆ ಕಮ್ಮಿಷನರಿಗೆ ತಿಳಿಸಲಿಕ್ಕೆ ಬದ್ಧನಾಗಿರತಕ್ಕದ್ದು ಯಂದು ವಿಧಿಸುವದು ಅಸ್ಪಷ್ಟವಾಗಿಯೂ ಮತ್ತು ಸಾಧ್ಯವಾದ ಮಟ್ಟಿಗೆ ಕೆಡಕು ವುಂಟುಮಾಡುವದಕ್ಕೆ ಆಸ್ಪದವಾದದ್ದಾಗಿಯೂ ಇರುವದರಿಂದ, ಕಮ್ಮಿಟಿಯವರು ಅದನ್ನು ಅನಾವಶ್ಯಕವೆಂದು ಭಾವಿಸಿ ತದನುಸಾರವಾಗಿ ಸದರೀ ಸೆಕ್ಷನಿನ ಯರಡನೇ ಭಾಗವನ್ನು ಅಪ್ಪುರ ಮಟ್ಟಿಗೆ ಬದಲಾಯಿಸಿರುತ್ತಾರೆ.

ಸೆಕ್ಷನ್ 26.

IVನೇ ಅಧ್ಯಾಯ.

(ಮುಲ್ಕೀ ಆಫೀಸರ್‌ಗಳಿಗೆ ನಿಷೇಧಿಸಲ್ಪಟ್ಟ ಕೆಲವು ಕೃತ್ಯಗಳನ್ನೂ ಅವರುಗಳ ಕೆಟ್ಟ ನಡತೆಗಾಗಿ ದಂಡನೆಯನ್ನೂ ಕುರಿತು.)

11. ಕಮ್ಮಿಟಿಯವರು, 31ನೇ ಸೆಕ್ಷನ ಅನುಸರಿಸಿ ಕೊಡಲ್ಪಡಬೇಕಾದ ಅಪ್ಪಣೆಯು ಗವರ್ಮೆಂಟಿನಿಂದ ಮಾತ್ರನೇ ಅಲ್ಲದೆ ಡೆಪ್ಯುಟೆ ಕಮ್ಮಿಷನರಿಂದಾಗಲಿ ಸರ್ವೇ ಸೂಪರ್‌ಟೆಂಡೆಂಟರಿಂದಾಗಲಿ ಕೊಡಲ್ಪಡತಕ್ಕದ್ದಲ್ಲವೆಂದು ಭಾವಿಸುತ್ತಾರೆ.

ಸೆಕ್ಷನ್ 31.

ಸೆಕ್ಷನ್ 31ರ (1, 2)ನೇ ಕ್ಲಾಜುಗಳಲ್ಲಿ ವಿಧಿಸಿರುವ ನಿಷೇಧಗಳಿಂದ ಶೇಕ್‌ದಾರ್ ದರ್ಜೆಗೆ ಕೀಳ್ಪಟ್ಟ ಗ್ರಾಮ ನೌಕರ್‌ಗಳು ವ ರೆವಿನ್ಯು ಆಫೀಸರ್‌ಗಳನ್ನು ವಿನಾಯಿಸುವ ಒಂದು ನಿಯಮವು ಅವಶ್ಯಕವೆಂದು ಇರಾಡಿಸಲ್ಪಟ್ಟಿರುತ್ತೆ; ಅಂಥಾ ಆಫೀಸರ್‌ಗಳು ವ್ಯಾಪಾರದಲ್ಲಿ ಪ್ರವರ್ತಿಸುವದನ್ನಾಗಲಿ ಹರಾಜಿನಲ್ಲಿ ವಾಸ್ತವ್ಯವಾಗಿ ದರಬಾಸ್ತು ಮಾಡುವದನ್ನಾಗಲಿ, ಅಂಥಾ ಆಫೀಸರೇ ಹರಾಜ್ ನಡಿಸುವ ಸಂದರ್ಭದಲ್ಲಿ ವಿನಾ, ಅನ್ಯಥಾ ನಿಷೇಧಿಸುವದು ಹಿಂಸೆಕರವಾಗಿರುವದು.

12. ಸೆಕ್ಷನ್ 35ರಲ್ಲಿ ಹೇಳುವ ಅಂಕಗಳಿಗೆ, ಅಪ್ಪೀಲ್‌ಗಳು ಕುರಿತ ಅಧ್ಯಾಯದಲ್ಲಿ ಹೇಳಿರುವದೇ ಸಾಕಾಗಿರುವದರಿಂದ ಸದರೀ ಸೆಕ್ಷನ್ ಅನಾವಶ್ಯಕವಾಗಿ ಕಾಣುತ್ತೆ.

ಸೆಕ್ಷನ್ 35.

Vನೇ ಅಧ್ಯಾಯ.

(ಜಮೀರ್ಾ ಮತ್ತು ಜಮೀರ್ಾ ಕಂದಾಯವನ್ನು ಕುರಿತು.)

13. ಸೆಕ್ಷನ್ 40, ಪರಭಾರೆ ಮಾಡಲ್ಪಡದ ಜಮೀನಿಗೆ ಮಾತ್ರ ಲಗಾವಾಗುವಂತೆ ವಿಧಿಸಿ ಬದಲಾಯಿಸಲ್ಪಟ್ಟಿರುತ್ತೆ. ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನಲ್ಲಿ ಇದಕ್ಕಿಂತ ಹೆಚ್ಚಾಗಿ ವಿಧಿಸಿರುವದಿಲ್ಲ. ಕಮ್ಮಿಟಿಯವರು, ಗನಿಯಿಂದ ತೆಗಿಯುವ ಪದಾರ್ಥಗಳಿಗೆ ಗವರ್ಮೆಂಟಿನವರು ತಮ್ಮ ಹಕ್ಕುದಾರಿಯನ್ನು ಸಮಯ ಬಂದಾಗ್ಯೆ ಸ್ಥಾಪಿಸುವ ಆವಶ್ಯಕತೆಯನ್ನು ಪೂರಾ ತಿಳಿದಿರುತ್ತಾರೆ, ಮತ್ತು ಅಂಥಾ ಹಕ್ಕು ಪರಭಾರೆ ಮಾಡಲ್ಪಡದಂಥಾ ಜಮೀನಂತೆ ಪರಭಾರೆ ಮಾಡಲ್ಪಟ್ಟ ಜಮೀನಲ್ಲಿ ಸ್ಥಾಪಿಸುವದಕ್ಕೋಸ್ಕರ ಈಗಿನ ಸಮಯ ಅಷ್ಟು ಅನುಕೂಲವಾದ್ದಲ್ಲವೆಂದು ತೋರಿಸುವದು ಕ್ರಮ ಸಾಧ್ಯವೆಂದು ತಿಳಿಯುತ್ತಾರೆ. ಹ್ಯಾಗಾದಾಗ್ಯೂ ಗನಿಗಳು ಮತ್ತು ಗನಿಗಳಿಂದ ಹುಟ್ಟುತಕ್ಕ ಪದಾರ್ಥಗಳ ಕುರಿತ ರಾಜ ಭಾಧ್ಯತೆಯು ಇದಿಯೇ ಯಾ ಇಲ್ಲವೆ ಯಂಬ ವಿಷಯ, ಪರಭಾರೆ ಮಾಡಲ್ಪಟ್ಟ ಜಮೀನಗಳಿಗೆ ಲಗಾವ್

ಮಾಡಿದಾಗ ಸದರೀ ಪ್ರಶ್ನೆಯು ಬಹಳ ದೊಡ್ಡದಾಗಿಯೂ ವಿಶೇಷ ಮುಖ್ಯವಾದ್ದಾಗಿಯೂ ಇರುತ್ತೆ; ಕಮ್ಮಿಟಿಯವರು ಈ ಪ್ರಶ್ನೆಯನ್ನು ಬಂದು ವಿಧವಾಗಿ ಆಗಲಿ ಅನ್ಯಥಾ ಆಗಲಿ ಕಾನೂನಿನಿಂದ ಉದ್ಧರಿಸದೆ, ಹಾಲಿ ಇರುವಂತೆಯೆ ಬಿಟ್ಟುಬಿಡುವದಕ್ಕೆ ಇರಾದೆ ಪಡುತ್ತಾರೆ. ಹೀಗೆ ಪರಭಾರೆಮಾಡಲ್ಪಟ್ಟ ಜಮ್ರ್ಗಳಲ್ಲಿ ಗನಿಯಿಂದ ತೆಗೆಯಲ್ಪಡುವ ಪದಾರ್ಥಗಳಿಗೆ ಸರ್ಕಾರದವರ ಹಕ್ಕುದಾರಿಯು ಪ್ರಕಟಿಸಿಗೆ ಬಂದಾಗ್ಯೆ ಮಾಮೂಲ್ ಮತ್ತು ಪ್ರಥಮ ಬಾಧ್ಯತೆ ವಿಷಯದಲ್ಲಿ ಇದುವರಿಗೆ ಮಾಡಲ್ಪಟ್ಟಿರುವದಕ್ಕಿಂತಲೂ ವಿಶೇಷ ಜಾಗರೂಕತೆಯಾದ ವಿಚಾರಣೇ ಮೇಲೆ ತೀರ್ಮಾನಿಸುವದಕ್ಕೆ ಅದೇಕಾಲವಾಗಿರುವದು. ಇಲ್ಲಿ ತಿಳಿಸಬೇಕಾದ್ದೇನಂದರೆ, ಗವರ್ಮೆಂಟಿನವರಿಂದ ಕೊಡಲ್ಪಟ್ಟಿರುವ ಯಾವ ಸನ್ನದಿನಲ್ಲೇ ಆಗಲಿ, ಪರಭಾರೆ ಸಾಧನದಲ್ಲೇ ಆಗಲಿ ಗನಿಗಳ ಬಾಧ್ಯತೆಯನ್ನು ಕುರಿತ ಅಂಕವು ಪ್ರಾಯಶಃ ನಮೂದಿಸಿರುವದಿಲ್ಲ; ಆದ್ದರಿಂದಲೇ ಮುಂಬೈ ಲ್ಯಾಂಡ್ ರೆವಿನ್ಯೂ ಕೋಡಿನ 69ನೇ ಸೆಕ್ಷನು, ಮೈಸೂರು ಲ್ಯಾಂಡ್ ರೆವಿನ್ಯು ಕೋಡಿನ ನಿಯಮದ ಕಲಮುಗಳೊಂದಿಗೆ ಅಂಗೀಕರಿಸಲ್ಪಟ್ಟಿರುತ್ತೆ.

ಸೆಕ್ಷನ್ 42.

14. ಬಂದು ಗ್ರಾಮಕ್ಕೆ ಸೇರಿರುವ ಯಾ ವರ್ಗ ಮಾಡಲ್ಪಟ್ಟಿರುವ ಕಾವಲ್ ಜಮೀನುಗಳು, ಅದೇ ಗ್ರಾಮಸ್ಥರ ಉಪಯೋಗದಲ್ಲಿ ಮಾತ್ರವೇ ಇದ್ದರೆ, ಮೇಯಿಸುವ ವಿಷಯದಲ್ಲಿ ಗ್ರಾಮಸ್ಥರುಗಳೊಳಗೆ ವ್ಯಾಜ್ಯವು ಖಂಡಿತವಾಗಿ ಉಂಟಾಗುವವು, ಅಂಥಾ ವ್ಯಾಜ್ಯಗಳುಂಟಾಗದಂತೆ 42ನೇ ಸೆಕ್ಷನು ಬದಲಾಯಿಸಲ್ಪಟ್ಟಿರುತ್ತೆ. ಮೈಸೂರು ಶೀಮೆಯಲ್ಲಾದರೂ, ಧರ್ಮದ ಕಾವಲನ್ನು ಪಯೋಗಿಸುವ ವಿಷಯದಲ್ಲಿ ಯಾವಾಗಲೂ "ಮಾಮೂಲ್" ಅನುಸರಿಸಿ ಯೇರ್ಪಾಡಾಗುವ ಕಾರಣ, ಆ ಪದ್ಧತಿಗೆ ವೆತಿರಿಕ್ತವಾಗಿ ನಡಿಸುವ ಅಂಶದಲ್ಲಿ ಕಮ್ಮಿಟಿಯವರು ಅಭಿಪ್ರಾಯ ಪಡುವದಿಲ್ಲ.

ಸೆಕ್ಷನ್ 45.

15. ಮಸೂದಾ ಕೋಡಿನ 45ನೇ ಸೆಕ್ಷನು ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನ 40ನೇ ಸೆಕ್ಷನಿಗೋಸ್ಕರ, ತಳ್ಳುಪಡಿಮಾಡಲ್ಪಟ್ಟಿರುತ್ತೆ, ಯಾಕಂದರೆ 40ನೇ ಸೆಕ್ಷನು, ಮೈಸೂರು ದೇಶದಲ್ಲಿ ಹಾಲೀ ಜಾರೀಲಿರುವ ಕಾಯಿದೆಗೆ ಸದಿಯಾಗಿ ಅನುಸರಿಸಿರುತ್ತದೆ, ಹ್ಯಾಗಂದರೆ, ಮಸೂದಾ ಕೋಡಿನ 45ನೇ ಸೆಕ್ಷನಿನಲ್ಲಿ, ವುಳಿಸಿಕೊಳ್ಳಲ್ಪಟ್ಟ ಮರಗಳಿಗೆ ಇರತಕ್ಕ ಹಕ್ಕುದಾರೀಯನ್ನು ಸೆಟಲ್‌ಮೆಂಟ್ ಆದ ಯರಡು ವರುಷಗಳೊಳಗಾಗಿ ಚಲಾಯಿಸಬೇಕಾದ ವಿಷಯದಲ್ಲಿ ರದ್ದಾಗಿರುವ ನಿಬಂಧನೆಯನ್ನು ನಮೂದಿಸಿರುತ್ತೆ; ಆದರೆ ಪ್ರಕೃತದಲ್ಲಿ, ಚೀಫ್ ಕಮ್ಮಿಷನರವರಿಂದ ಕೊಡೋಣಾದ 1879ನೇ ಇಸವಿ ಆಗಸ್ಟು 6ನೇ ಮುಕ್ತಂ 1796—1810—345ನೇ ನಂಬರ್ ಹುಕುಮನ್ನನುಸರಿಸಿ, ಸೆಟಲ್‌ಮೆಂಟ್ ಕಾಲದಲ್ಲಿಯೇ ಮರಗಳನ್ನು ವುಳಿಸಿಕೊಳ್ಳೋಣವು ಬಂದೇ ದಫಾ ಆಜ್ಞೆಯಾಗಿ ನಡಿಯುತ್ತದೆ. ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನ 40ನೇ ಸೆಕ್ಷನೇ ಸಂಪೂರ್ತಿ ಯಾಗಿರುವಣದರಿಂದ, ಅದಕ್ಕೆ ಬದಲಾವಣೆಗಳನ್ನು ಸೇರಿಸಿದರೆ, ಮೈಸೂರು ಶೀಮೆಯ ಸ್ಥಿತಿಗೆ ಸರಿಯಾಗುವದು.

ಸೆಕ್ಷನ್‌ಗಳು 43 ಮತ್ತು 44.

ಮಸೂದಾ ಕೋಡಿನ 43 ಮತ್ತು 44ನೇ ಸೆಕ್ಷನ್‌ಗಳ ದೆಸೆಯಿಂದ, ಮುಂಬೈ ಲ್ಯಾಂಡ್ ರೆವಿನ್ಯುಕೋಡಿನ 41ನೇ ಸೆಕ್ಷನಿನ ವುದ್ದೇಶವು ನೆರವೇರುತ್ತದೆಯಾಗಿ, ಆ ಸೆಕ್ಷನ್‌ಗಳು ಕಾಯಂಮಾಡಲ್ಪಟ್ಟಿರುತ್ತವೆ; ಮತ್ತು ಉಳಿಸಿಕೊಳ್ಳಲ್ಪಟ್ಟ 9 ಬಗೆ ಮರಗಳ ತಪಶೀಲು ಮಸೂದಾ ಕೋಡಿನಲ್ಲಿರಕ್ಕದ್ದ ಅವಶ್ಯಕವೆಂದು ತೋರುತ್ತೆ, ಆದರೆ ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನಲ್ಲಿ ಈ ತಪಶೀಲು ನಮೂದಿರುವದಿಲ್ಲವು.

16. ರಸ್ತೆಯ ಪಕ್ಕದಲ್ಲಿರುವ ಮರಗಳನ್ನು ಕುರಿತ 48ನೇ ಸೆಕ್ಷನಿನ 2ನೇ ವುಪನಿಬಂಧನೆಯ ದೆಸೆಯಿಂದ, ನಿಷ್ಕಾರಣವಾದ ಮತ್ತು ತೊಂದರೆ ವುಂಟುಮಾಡುವಂಥಾ ದರಖಾಸ್ತುಗಳು ಬರಲಿಕ್ಕೆ ಆಸ್ಪದವಾಗುತ್ತೆಯಾಗಿ, ಆ ವುಪನಿಬಂಧನೆಯು ಅನಾವಶ್ಯಕವೆಂದು ವಜಾಮಾಡಲ್ಪಟ್ಟಿರುತ್ತೆ.

ಸೆಕ್ಷನ್ 49.

17. ಬಗರಿ ಹುಕುಂ ವುಪಯೋಗಿಸಿಕೊಂಡದ್ದಕ್ಕೆ ಶಿಕ್ಷೆಯಾಗಿ, 49ನೇ ಸೆಕ್ಷನ್‌ನಲ್ಲಿ ವಿಧಿಸೋಣಾದಂತೆ ಜಮ್ರ್ಗಳತ್ತುವರಿ ವಿಷಯವಲ್ಲದ ಸಂದರ್ಭನಲ್ಲಿ, ಮುರದ ಖರೀದಿ ಮಾತ್ರ ವಸೂಲ್ ಮಾಡೋಣವು ಕೇವಲ ಕಮ್ಮಿಯಾದ ಶಿಕ್ಷೆಯೆಂದು ಕಮ್ಮಿಟಿಯವರು ಅಭಿಪ್ರಾಯ ಪಡುತ್ತಾರೆ. ಆದ್ದರಿಂದ ಸದರೀ ಖರೀದಿ ಶಿವಾಯಿ 50 ರೂಪಾಯಿ ವರವಿಗೂ ಫ್ಲಾಟಿನಲ್ಲಿ ಜುರ್ಮಾನೆ ವಿಧಿಸತಕ್ಕ ಅಧಿಕಾರವು ವಿಧಿಸಲ್ಪಟ್ಟಿರುತ್ತೆ.

ಸೆಕ್ಷನ್ 50.

18. 50ನೇ ಸೆಕ್ಷನ್‌ನಲ್ಲಿ ತಮಾಂ ಜಮ್ರ್ಗಳ ಕಂದಾಯದ ವಸೂಲಾತಿಯು ಸಂಸ್ಥಾನದ ಆವಶ್ಯಕತೆಗಳಿಗೋಸ್ಕರ ಜರೂರಾದಾಗ ಮತ್ತು ಜರೂರಾಗಿರುವ ಪರ್ಯಂತ ಅಂಥಾ ವಸೂಲಾತಿಯನ್ನು ಕಾನೂನಿನಿಂದ ವಿಧಿಸಲಿಕ್ಕೆ ಗವರ್ಮೆಂಟಿನವರು ವುಳಿಸಿಕೊಂಡಿರುವ ಅಧಿಕಾರ ನಮೂದಿಸಿರುವ ಭಾಗವನ್ನು ತಳ್ಳುಪಡಿ ಮಾಡಬೇಕೆಂಬುದನ್ನೂ ಗವರ್ಮೆಂಟಿನ ಅಂಥಾ ಸ್ವಾತಂತ್ರ್ಯವನ್ನು ಹಾಲೀ ಕಾನೂನಿನಲ್ಲಿ ಉದಹರಿಸಲಿಕ್ಕೆ ಯಾವ ವುದ್ದೇಶವೂ ಯಿರುವದಿಲ್ಲವೆಂದುನ್ನೂ ಕಮ್ಮಿಟಿಯವರು ಅಭಿಪ್ರಾಯ ಪಡುತ್ತಾರೆ.

19. 1876ನೇ ಇಸವಿಯ 17ನೇ ನಂಬರುಳ್ಳ ಅಯೋಧ್ಯೆಯ ರೆವಿನ್ಯು ಆಕ್ಟಿನ 134ನೇ ಸೆಕ್ಷನಿನ ಆಧಾರದ ಮೇಲೆ, 59ನೇ ಸೆಕ್ಷನಿಗೆ ಒಂದು ನಿಯಮವನ್ನ ಕಮ್ಮಿಟಿಯವರು ಕೇರಿಸಿರುತ್ತಾರೆ, ಇದು ಮೈಸೂರು ಸೀಮೆಯಲ್ಲಿ ಹಾಲೀಜಾರೀಲಿಧೆಯಂದು ಹೇಳಬೇಕಾದ ಅವಶ್ಯಕವಿಲ್ಲ, ಸದರೀ ಸೆಕ್ಷನನುಸರಿಸಿ ಕೊಡಲ್ಪಟ್ಟ ಅಧಿಕಾರಗಳನ್ನ ದುರುಪಯೋಗಪಡಿಸದಂತೆ ಅಡ್ಡಿಪಡಿಸುವದೆಂದು ಕಮ್ಮಿಟಿಯವರು ಯೋಚಿಸುತ್ತಾರೆ.

ಸೆಕ್ಷನ್ 59.

20. ರೈತರಿಗೆಳಿಗೆ ಗ್ರಾಮದ ಶಾನುಭೋಗನ ಅಡ್ಡರುಜು ಆಗಲೇಬೇಕೆಂದು ನಮೂದಿರುವ 2ನೇ ವುಪನಿಬಂಧನೆಯನ್ನ, 61ನೇ ಸೆಕ್ಷನ್ ದೆಸೆಯಿಂದ ಕಮ್ಮಿಟಿಯವರು ಸ್ವಲ್ಪ ಸಂಶಯದಿಂದ ವಜಾ ಮಾಡಿರುತ್ತಾರೆ. ಪರಭಾರೆಯಾದ ಗ್ರಾಮಗಳ ಹಿಡುವಳಿದಾರರು, ಈ ನಿಯಮವು ಇರಲೇಕೂಡದೆಂದು ಸ್ಥಾಪಿಸುತ್ತಾರೆ, ಅದಕ್ಕೆ ಹೇಳುವ ಕಾರಣವೇನಂದರೆ, ಅಂಥಾ ಗ್ರಾಮಗಳಿಗೆ ಪ್ರಾಯೀಣ ಶಾನುಭೋಗನೇ ಇರುವದಿಲ್ಲ, ಬಂದು ವೇಳೆ ಯಾವದಾದರೊಂದು ಗ್ರಾಮಕ್ಕೆ ಶಾನುಭೋಗನಿದ್ದಲ್ಲಿ ಅಂಥವನ ಅಡ್ಡರುಜುವು ಆವಶ್ಯಕವೆಂದೆಂಬುವಣ ಮಾತ್ರದಿಂದಲೇ ಅವಶ್ಯಕ ವುಂಟುಮಾಗಲೆಲ್ಲ ಅವನು ಪದೇಪದೇ ಗೈರ್‌ಹಾಜರಾಗುವದರಿಂದುಂಟಾಗುವ ಸಾಧಾರಣ ಅನಾನುಕೂಲ ಹಾಗಿರಲಿ, ಮುಖ್ಯ ಹಿಡುವಳಿದಾರನಿಗೆ ತೊಂದರೆ ವುಂಟು ಮಾಡಲಿಕ್ಕೆ ಇಲ್ಲದ ಅಧಿಕಾರವನ್ನ ಶಾನುಭೋಗನಿಗೆ ಕೊಟ್ಟಂತೆ ಆಗುತ್ತೆಯಂದು ಹೇಳುತ್ತಾರೆ. ಪರಭಾರೆಯಾದ ಗ್ರಾಮಗಳಿಗೆ ಶಾನುಭೋಗರಿರುವದು ವುಪಯೋಗವಾದ್ದೆಂಬ ಅಂಶವು ಕಮ್ಮಿಟಿಯವರು ಚನ್ನಾಗಿ ತಿಳಿದೇ ಇರುತ್ತಾರೆ, ಪರಂತು ಅನೇಕ ಗ್ರಾಮಗಳ ಹಿಡುವಳಿದಾರ್‌ಗಳಲ್ಲೇ ವಿಶೇಷವಾದ ವೆತ್ಯಾಸಗಳುಂಟು, ಮಸಲಾ ಒಬ್ಬ ಜಹಗೀರ್‌ದಾರನಿಗೂ ವೊಂದೇ ವೊಂದು ಸಂಣ ಗ್ರಾಮದ ಹಿಡುವಳಿದಾರನಿಗೂ ಬಹಳ ವೆತ್ಯಾಸವಿರುತ್ತೆ; ಜಹಗೀರ್‌ದಾರ್‌ಗಳು ತಮ್ಮ ತಮ್ಮ ಶಾನುಭೋಗರುಗಳನ್ನ ವೊಕರರ್ರಾಡಿಕೊಂಡು ಅವರನ್ನೇ ನಂಬಬೇಕಾಗುತ್ತೆ, ಪರಂತು ಸಂಣ ಗ್ರಾಮಗಳ ಹಿಡುವಳಿದಾರರುಗಳು ತಮ್ಮ ತಮ್ಮ ಆಪತ್ತುಗಳನ್ನ ತಾವೆ ನಿರ್ವಹಿಸಲಿಕ್ಕೆ ಅಪ್ಪಣೆ ಕೊಡಲ್ಪಡದ ಪಕ್ಷದಲ್ಲಿ ಕೇವಲ ಅನಾನುಕೂಲಕ್ಕೆ ಬಳಪಡುವರು.

VIನೇ ಅಧ್ಯಾಯ.

(ಪರಭಾರೆಯಾಗದ ಜಮೀನಿನ ಅನುಭವ ವ ಅನುಭವದಾರರ ಬಾಧ್ಯತೆಗಳನ್ನ ಕುರಿತು.)

21. 75ನೇ ಸೆಕ್ಷನು, ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನ 72ನೇ ಸೆಕ್ಷನಿನಂತೆಯೇ ಮೂಡಲ್ಪಟ್ಟು ಇದೆ. ಸದರೀ ಸೆಕ್ಷನಿನಲ್ಲಿ ಹಿಂದೂ, ಮಹಮ್ಮದಿಯರ್ ವ ಬೌದ್ಧ ಯಂಬ ವಿವರಣೆಯು, ಬಾಧ್ಯತೆಯ ಆಕ್ಟಿನ ವುಪಯೋಗಕ್ಕಾಗಿ ಐದಂಪರ್ಯೇಣ ಮಾಡಲ್ಪಟ್ಟಿತು. ಮೈಸೂರು ಸೀಮೆಯೊಳಗೂ ಇದೇ ಕಾರಣವಿರುವದರಿಂದ ಅದೇ ಮೇರಿಗೆ ಈ ಸೆಕ್ಷನನ್ನ ಬದಲಾಯಿಸಿರುತ್ತೆ.

ಸೆಕ್ಷನ್ 72 ಮತ್ತು 75.

VIIನೇ ಅಧ್ಯಾಯ.

(ಮೇಲ್ಪಟ್ಟ ಮತ್ತು ಕೀಳ್ಪಟ್ಟ ಹಿಡುವಳೀದಾರರ ವಿಷಯ.)

22. ಈ ಅಧ್ಯಾಯದಲ್ಲಿ, ಬಹಳ ಮುಖ್ಯವಾದ ಬದಲಾವಣೆಗಳು ಸೂಚಿಸಲ್ಪಟ್ಟಿರುತ್ತವೆ, ಇದಕ್ಕೆ ಲಗ್ನತ ಮಾಡಿರುವ ಮಸೂದಾಯಿಂದ ಆ ಬದಲಾವಣೆಗಳು ಚಂದಾಗಿ ತಿಳಿದುಬರುವದು; ಕಮ್ಮಿಟಿಯವರು ಮಾಡಿರುವದೇನಂದರೆ, "ಕಂದಾಯದ ಷಿಕ್ಮೀದಾರ" ಮತ್ತು "ಅನುಭವದ ಷಿಕ್ಮೀದಾರ" ಯಂಬ ಭೇಧವನ್ನ ನಿವೃತ್ತಿ ಮಾಡಿ 'ಕಂದಾಯದ ಷಿಕ್ಮೀದಾರ್'ರೆಂಬುದಕ್ಕೆ ಬದಲಾಗಿ "ಕದೀಂ ಷಿಕ್ಮೀದಾರ್" ಯಂಬದನ್ನು ವುಪಯೋಗಿಸಿರುತ್ತಾರೆ. ಮಸೂದಾ ಕೋಡಿನಲ್ಲಿ "ಕಂದಾಯದ ಷಿಕ್ಮೀದಾರನ" ವಿಷಯದಲ್ಲಿ ವುಂಟಾಗಿರುವ ನಿಬಂಧನೆಗಳು ಕದೀಂ ಷಿಕೀದಾರನ ವಿಷಯವಾಗಿ ಬದಲಾಯಿಸಲ್ಪಟ್ಟಿರುವದಿಲ್ಲ.

23. "ಕದೀಂ ಷಿಕ್ಮೀದಾರನ" ಹಕ್ಕುಗಳಲ್ಲದೆ ಜವಾಬದಾರೀಗಳನ್ನೂ ವೆದಹರಿಸುವದು ಅವಶ್ಯಕವಾದ್ದರಿಂದ 85ನೇ ಸೆಕ್ಷನಿನ 4ನೇ ಸಬ್ ಡಿವೀರ್ಜನಲ್ಲಿ ನಮೂದಿರತಕ್ಕ "ಕದೀಂ ಷಿಕ್ಮೀದಾರ್" ಯಂಬದರ ಆರ್ಥ ವಿವರಣೆಯು 245ನೇ ಸೆಕ್ಷನಿನಂತೆಯೆ ಮಾಡಿರುತ್ತೆ. ಈ ಸೆಕ್ಷನ್ ಅನುಸರಿಸಿ ಹಕ್ಕುಗಳು ಮತ್ತು ಜವಾಬ್‌ದಾರಿಗಳು ಹೆಪ್ಯುಟಿ ಕಮ್ಮಿಷನರವರಿಂದ ಮಾತ್ರ ಜಾರೀಗೆ ತರಲ್ಪಡತಕ್ಕದ್ದು ಯುಕ್ತವಾದ್ದೆಂತ ಕಮ್ಮಿಟಿಯವರು ಅಭಿಪ್ರಾಯ ಪಟ್ಟು ಸದರೀ ಸೆಕ್ಷನಿಗೆ ಅವಶ್ಯಕವಾದ ನಿಬಂಧನೆಯನ್ನು ಕೇರಿಸಿರುತ್ತಾರೆ.

ಸೆಕ್ಷನ್ 85.

"ಅನುಭವದ ಷಿಕ್ಮೀದಾರ್" ಯಂಬದು ಈ ಅಧ್ಯಾಯದಲ್ಲಿ ಪ್ರಸಕ್ತವಾಗಿಲ್ಲವಾದ್ದರಿಂದ ಷಿಕ್ಮೀದಾರನ ಹಕ್ಕುಗಳಿಂಬದಕ್ಕೆ ಸಾಮಾನ್ಯಾರ್ಥವಿವರಣೆಯು ಅತ್ಯಂತಾವಶ್ಯಕವಾದ್ದರಿಂದ ಮುಂಬೈ ಲ್ಯಾಂಡ್ ರೆವಿನ್ಯೂ ಕೋಡಿನ 83ನೇ ಸೆಕ್ಷನ್ ಕೀರಿಸಲ್ಪಟ್ಟಿರುತ್ತೆ. ಆ ಸೆಕ್ಷನಿನ ನಿಂಬಧನೆಗಳೊಳಗೆ ಜಮ್ಮೀದಾರನಿಗವಗುಣವಾಗಿ ಅನುಭವದ ಕಾಲ ಪರಿಮಿತಿಯ ಊಹೆಯ ಕಲಮು ನಮೂದಿರುತ್ತೆ. ಇದರ ಫಲಿತಾಂಶವೇನಂದರೆ ಏನಾದರೂ ತಕರಾರು ಸಂಭವಿಸಿದಾಗ "ರುಜುವಾತು ಮಾಡಿಕೊಡತಕ್ಕ ಭಾರ" ನಾಡಿಕೆಯಾಗಿ ಜಮ್ಮೀದಾರನ ಮೇಲೆಯೇ ಹೊರುತ್ತದೆ. ಮತ್ತು ಸ್ಥಳ ಪದ್ಧತಿಯನ್ನನುಸರಿಸಿಯಾಗಲಿ, ಅನ್ಯಥಾ ಆಗಲಿ, ತೆರಿಗೆಯನ್ನು ಹೆಚ್ಚಿಸಲಿಕ್ಕೂ, ಅಥವಾ ತೆರಿಗೆ ಸಲ್ಲಿಸದಿದ್ದರೆ ಅನುಭವದಾರನ ಕೈ ತಪ್ಪಿಸಲಿಕ್ಕೂ ಜಮ್ಮೀದಾರನಿಗಿರುವ ಸ್ವಾತಂತ್ರ್ಯ ಸಹ ಸದರೀ ಸೆಕ್ಷನು ವುದಹರಿಸುತ್ತದೆ. ಪರಂತು ಜಮ್ಮೀದಾರನು ಅಂಥಾ ಸ್ವಾತಂತ್ರ್ಯವನ್ನು ನ್ಯಾಯವಾಗಿ ಪಡೆದವನಾಗಿರಬೇಕು.

24. "ಅನುಭವದಾರ್ ರೈತರುಗಳ" ಪ್ರಕರಣವನ್ನು ಈ ಕಾನೂನಿನಿಂದ ಕುದ್ದಾಂಗ ತಳ್ಳುಪಡಿ ಮಾಡಬೇಕೆಂಬ ಅಭಿಪ್ರಾಯಕ್ಕೆ ಕಮ್ಮಿಟಿಯವರಿಗೆ ವುಂಟಾದ ಕಾರಣಗಳನ್ನ ಸಂಕ್ಷೇಪವಾಗಿ ಇದರಡಿ ನಮೂದಿಸಿಧೆ; ಏನಂದರೆ:—

ಮೊದಲಿನ ಮಸವಿದಾ ಕೋಡಿನಲ್ಲಿ ಅನುಭವದಾರ್ ರೈತನಿಗೆ ವುಂಟುಮಾಡುವ ಬಾಧ್ಯತೆಯು, ಗ್ರಾಮ ಸರಕಾರದಿಂದ ವರಭಾರೆದಾರನ ಸುಪರ್ದಾಗುವ ಕಾಲದಲ್ಲಿ ಗ್ರಾಮದ ಸ್ಥಿತಿಗಳನುಸರಿಸಿ ವುಂಟಾದಂತೆಯೆ ಅಲ್ಲವು; ಈಮುಖ್ಯ ತತ್ವದ ಆಧಾರದಿಂದಲೇ ಜಮಿನಿನ ಯಜಮಾನನಿಗೂ ಷಿಕ್ಮೀದಾರನಿಗೂ ಇರುವ ಪರಸ್ಪರ ಸಂಬಂಧವನ್ನ ಕುರಿತು ಹೊಲಿ ಕಾನೂನನ್ನೇರ್ಪಡಿಸತಕ್ಕದ್ದಾಗಿ ಇಧೆಯೆಂದು ಕಮ್ಮಿಟಿಯವರು ಯೋಚಿಸುತ್ತಾರೆ. "ಅನುಭವ ಷಿಕ್ಮೀದಾರನ್ನ" ಕುರಿತ ಸೆಕ್ಷನ್ಗಳನ್ನ ಕಾಯಂ ಇಡಬೇಕೆಂಬದಾಗಿ ಕಮ್ಮಿಟಿಯವರು ಸೂಚಿಸಿದ್ದ ಪಕ್ಷದಲ್ಲಿ ಅವನ ಹಕ್ಕುದಾರಿಯು ಪಾರಂಪರ್ಯವಾಗಿರತಕ್ಕದ್ದೆಂತಲೂ ಸ್ವತ್ತು ವರಭಾರೆ ಮಾಡಲಿಕ್ಕೆ ಯೋಗ್ಯವಾಗಿರತಕ್ಕದ್ದೆಂತಲೂ, ಪರಂತು ಪರಭಾರೆ ಆಗುವ ಸಂದರ್ಭದಲ್ಲಿ ಪ್ರಾಯೇಣ ಮುಖ್ಯ ಹಿಡುವಳ್ಕೀದಾರನೇ ವಹಿಸಿಕೊಳ್ಳುವ ಬಾಧ್ಯತೆಗೆ ಒಳಪಟ್ಟಿರತಕ್ಕದ್ದೆಂತಲೂ ಸಹ ಸೂಚಿಸುತ್ತಿದ್ದರು. "ಕದಿಂ ಷಿಕ್ಮೀದಾರನು" ಇಷ್ಟರ ಮಟ್ಟಿಗೆ ಹಕ್ಕುದಾರಿವ್ಯವನೆಂಬದಾಗಿಯೂ, ಅವನಿಗೆ ಕಾನೂನಿನ ಮೂಲಕ ಕಮ್ಮಿಟಿಯವರು ವುಂಟುಮಾಡಿಕೊಡಬೇಕೆಂಬ ಬಾಧ್ಯತೆ ಇಂಥಾದ್ದೆಂಬದು ಸಹ, ಮುಖ್ಯ ಹಿಡುವಳ್ಕೀದಾರರು ಚನ್ನಾಗಿ ತಿಳಿದೇ ಇರುತ್ತಾರೆ. ಗ್ರಾಮಕ್ಕೆ ಸಾಗುವಳ್ಕೀದಾರನ್ನ ತಾವೇ ತಂದವರೆಂದುನ್ನೂ ಮುಖ್ಯವಾಗಿ ಅವರು ತಮ್ಮ ಸ್ವಂತ ರೈತರುಗಳೆಂದುನ್ನೂ ಮುಖ್ಯ ಹಿಡುವಳ್ಕೀದಾರರು ಹೇಳುತ್ತಾರಷ್ಟೆ, ಅಂಥಾ ಷಿಕ್ಮೀದಾರನ ವಿಷಯದಲ್ಲಿ ಈ ರೀತಿ ಧಾರಾಳವಾಗಿ ವರ್ತಿಸುವ ಬಲವಾದ ಆಕ್ಷೇಪಣೆಯು ದುರ್ಬಲವಾಗುತ್ತದೆ, ಆದರೆ ಮಸೂದಾಕೋಡಿನ 86ನೇ ಸೆಕ್ಷನನುಸರಿಸಿ ಷಿಕ್ಮೀದಾರನು ಪಡೆಯುವ ಅನುಭವದ ಬಾಧ್ಯತೆಗಳ ವಿಷಯದಲ್ಲಿ ತತ್ಸಾಪಿ ಅಂಥಾ ಬಾಧ್ಯತೆಗಳು ವರಭಾರೆಯಾಗಬಹುದಾಗಿ ಮಾಡಲ್ಪಡುವದಾದರೆ, ಮುಖ್ಯ ಹಿಡುವಳ್ಕೀದಾರರಿಗೆ ಅತ್ಯಂತ ಭೀತಿಯೂ ಅಸಮಾಧಾನ ಸಹ ವುಂಟಾಗುವದು. ಅನುಭವದ ಷಿಕ್ಮೀದಾರ್ರಗಳ ವರವಾಗಿ ಯಾವ ಕಾನೂನು ಮಾಡಲಿಕ್ಕೂ ಮುಖ್ಯ ಹಿಡುವಳ್ಕೀದಾರರು ತರುವ ಮುಖ್ಯವಾದ ಆಕ್ಷೇಪಣೆಯು

ಸೆಕ್ಷನ್ 86. ಮೈಸೂರು ಸೀಮೆಯೊಳ್ಳು ವಿಜಾತೀಯವಾದ ಯಾವ ಷರತ್ತುಗಳನುಸರಿಸಿ ಷಿಕ್ಮೀದಾರನು ಮುಖ್ಯ ಹಿಡುವಳ್ಕೀದಾರನ ತರೀ ವ ಖುಷ್ಕಿ ಜಮ್ಮೀಗಳನ್ನ ಸಾಗುವಳಿ ಮಾಡುತ್ತಾನೋ ಅಂಥಾ ಷರತ್ತಿನ ವಿಷಯದಲ್ಲೇ ಯಂಬದಾಗಿ ಕಮ್ಮಿಟಿಯವರು ನಂಬುತ್ತಾರೆ. ಷಿಕ್ಮೀದಾರನು, ಮುಖ್ಯ ಹಿಡುವಳ್ಕೀದಾರನ ತರೀ ಜಮಿನನ್ನ ಸಾಗುವಳಿ ಮಾಡಿ ಫಸಲ್ನಲ್ಲಿ ವಂದು ಹಿಸ್ಸೆ ತೆಗದುಕೊಳ್ಳುವ ಷರತ್ತಿನ ಮೇಲೆಯೇ ಪ್ರಾಯೇಣ ಖುಷ್ಕಿ ಜಮ್ಮೀಗಳನ್ನ ಕಮ್ಮೀ ಕಂದಾಯಕ್ಕೆ ಸಾಗುವಳೀ ತೊಡುತ್ತಾನೆ; ಆದರೆ ಷಿಕ್ಮೀದಾರನು ತರೀ ಜಮ್ಮೀ ಸಾಗುವಳಿ ಮಾಡಲಿಕ್ಕೆ ತಕರಾರ್ ಮಾಡಿದ್ದಾದರೆ ಅವನು ಖುಷ್ಕೀ ಜಮಿನನ್ನ ಸುಲಭ ಕಂದಾಯಕ್ಕೆ ಮಾಡಿಕೊಂಡಿರುವ ವಿಷಯದಲ್ಲಿಯಾದರೂ ಮುಖ್ಯ ಹಿಡುವಳ್ಕೀದಾರನು ಪ್ರಾಯಶಃ ತಕರಾರು ಮಾಡುತ್ತಾನೆ. ಈ ಮೇಲಿನ ಕಾರಣದಿಂದಲೇ ಷಿಕ್ಮೀದಾರನಿಗೆ ಅನುಭವದ ಹಕ್ಕುಂಟಾಗುವ ವಿಷಯದಲ್ಲಿ ಅವನು ತನ್ನ ಅಧೀನ ತಪ್ಪಿ ಹೋಗುವನೆಂತಲೂ ಅಥವಾ ಖುಷ್ಕೀ ಜಮ್ಮೀಗಳ ವಿಷಯದಲ್ಲಿ ಯಾವ ರೀತಿಯಲ್ಲಾದರೂ ಸ್ವತಂತ್ರನಾಗುವನೆಂತಲೂ ಮುಖ್ಯ ಹಿಡುವಳ್ಕೀದಾರನು ಭಯಪಡುತ್ತಾನೆ. ಹಳೇ ಷಿಕ್ಮೀದಾರನು ತನ್ನನ್ನೇ ಆಶ್ರಯಿಸಿಕೊಂಡಿರಬೆಕೆಂದು ಮುಖ್ಯ ಹಿಡುವಳ್ಕೀದಾರ ಇಚ್ಛೈಸುವದರಲ್ಲಿ ಯೇನೂ ಸಂಶಯವಿಲ್ಲವು, ಪರಂತು, ಈಗ ವುದ್ದೇಸಿಸಿರುವ ಭಾಧ್ಯತೆಯನ್ನು ಷಿಕ್ಮೀದಾರನಿಗೆ ಕೊಡತಕ್ಕ ಬಗ್ಗೆ ಕಳೆದ ತಿಂಗಳ 21ನೇ ತಾರೀಖಿನಲ್ಲಿ ಬಹುಮಂದಿ ಇನಾಂಗಾರರುಗಳನ್ನ ಕೀರಿಸಿ ಕೇಳಿದಾಗ "ಕದೀಂ ಷಿಕ್ಮೀದಾರ್"ನ ಬಾಧ್ಯತೆಯು ಸ್ಪಷ್ಟವಾಗಿ ತಿಳಿಯಬಂದದ್ದರಿಂದ ಅದಕ್ಕೆ ಆಕ್ಷೇಪಣೆಯೇ ಬರಲಿಲ್ಲಾ, ಇನ್ನು ಮುಂದೆ ವುಂಟಾಗುವ "ಅನುಭವ ಷಿಕ್ಮೀದಾರನ" ವಿಷಯದಲ್ಲಾದರೋ ಈಗ ವುದ್ದೇಸಿಸಿರುವ ಕಾನೂನಿಗೆ ಬಲವಾದ ಮತ್ತು ನಿರೂಢವಾದ ಆಕ್ಷೇಪಣೆ ಬರುವಣದರಲ್ಲೇನೂ ಸಂಶಯವಿಲ್ಲವು.

25. ಪುರಾತನ ಷಿಕ್ಮೀದಾರನಿಗೂ, ನೂತನ ಷಿಕ್ಮೀದಾರನಿಗೂ ಇರತಕ್ಕ ವಿಶೇಷವಾದ ಮತ್ತು ಸಾಮಾನ್ಯವಾದ ಭೇದದ ವಿಷಯದಲ್ಲಿ ನಿಬಂಧನೆಗಳು ಏರ್ಪಡಿಸಲ್ಪಟ್ಟು, ಮಿಕ್ಕ ವಿಷಯಗಳನ್ನ ಸಾಧಾರಣ ಕೋರ್ಟುಗಳಿಗೆ ಬಿಡತಕ್ಕದ್ದೆಂದು ಮಾತ್ರವೇ ಕಮ್ಮಿಟಿಯವರು ಅಭಿಪ್ರಾಯ ಪಡುತ್ತಾರೆ; 1875ನೇ ಇಸವಿ ಜನವರೀ 28ನೇ ತಾರೀಖಿನಲ್ಲಿ ಬೊಂಬಾಯಿ ಲ್ಯಾಂಡ್ ರೆವಿನ್ಯೂ ಕೋಡ್ ಪ್ರಥಮತಃ ಜಾರೀಗೆ ತರಲ್ಪಟ್ಟಾಗ ಈಗ ಕಮ್ಮಿಟಿಯವರಿಂದ ಸೂಚಿಸಲ್ಪಟ್ಟ ಅಂಕವೇ ಸದರೀ ಕೋಡ್ನಲ್ಲಿ ನಮೂದಿತ್ತು, ಆದರೆ ಜಮ್ಮೀದಾರನಿಗೂ ಷಿಕ್ಮೀದಾರನಿಗೂ ಇರತಕ್ಕ ಸಂಬಂಧಗಳು ತೊಡಕಾದ್ದೆಂದು ಯೋಚಿಸಲ್ಪಟ್ಟದ್ದರಿಂದ ಮೊದಲಿನ ಮಸೂದೆಯಲ್ಲಿ ಇದ್ದಷ್ಟು ಮಟ್ಟಿಗೆ ಈಗ ಜಾರೀಲಿರತಕ್ಕ ರೆವಿನ್ಯೂ ಕೋಡಿನಲ್ಲಿ ವಿಧಿಸಿರುವದಿಲ್ಲ. ಈ ಯರಡು ಬಗೆಯವರ ವಿಷಯದಲ್ಲಿ ನಿರ್ದಿಷ್ಟವಾದ ಅಂಕಗಳ ಕುರಿತು ಖಂಡಿತ

ವಾದ ನಿಬಂಧನೆ ಏರ್ಪಡಿಸುವಣ ಯುಕ್ತವೆಂತಲಾಗಲಿ ಅವಶ್ಯಕವೆಂತಾಲಾಗಲಿ ಕಮ್ಮಿಟಿಯವರು ಅಭಿಪ್ರಾಯ ಪಡುವದಿಲ್ಲ; ಮತ್ತು ಈ ವಿಷಯದಲ್ಲಿ ಬೊಂಬೈಯಲ್ಲಿಆಗಲಿ ಮದರಾಸಿನಲ್ಲಿಆಗಲಿ ನಿಬಂಧನೆಯೇ ಏರ್ಪಾಡು ಮಾಡಲ್ಪಟ್ಟಿರುವದಿಲ್ಲ.

26. ಪ್ಯಾರಾ 87ರ ವಿಷಯದಲ್ಲಿ, 85ನೇ ಸೆಕ್ಷನ್‌ನಲ್ಲಿ "ಕದೀಂ ಷಿಕ್ಕೀದಾರ" ಯುಂಬದರ ಅರ್ಥ ವಿವರಣೆಯು ತಿದ್ದುಪಡಿ ಮಾಡಿರುವದರಿಂದಲೂ "ಅನುಭವದ ಷಿಕ್ಕೀದಾರ" ಯಂಬದನ್ನು ಬಿಟ್ಟಿರುವದರಿಂದಲೂ ಸದರೀ ಸೆಕ್ಷನ್ ಯಿಟ್ಟುಕೊಳ್ಳಬೇಕಾದ ಅವಶ್ಯಕವಿಲ್ಲವು.
ಸೆಕ್ಷನ್ 85.

27. ಸೆಕ್ಷನ್ 88ರಲ್ಲಿ "ಬಂಜರು ಕೆಡಹಲ್ಪಟ್ಟಿರಲಿ" ಯಂಬ ಮಾತುಗಳತರುವಾಯ "ಅಥವಾ ಷಿಕ್ಕೀ ಸಾಗುವಳಿ ಕಳಕೊಂಡು ಯಿರಲಿ" ಯಂಬಮಾತುಗಳು ಐಂದೆ ಸಂಭವಿಸಬಹುದಾದ ಅಂಥಾ ಸಂದರ್ಭಗಳಿಗೋಸ್ಕರ ಸೇರಿಸಲ್ಪಟ್ಟಿರುತ್ತೆ.
ಸೆಕ್ಷನ್ 88.

28. ಸೆಕ್ಷನ್ 89 ಕ್ಲಾಜ್ (a) ಕ್ಕೆ "ಅಥವಾ 123ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ಸರ್ವೆಯು ತಿದ್ದುಪಡಿಗೋಸ್ಕರ" ಯಂಬ ಮಾತುಗಳು ಸೇರಿಸಲ್ಪಟ್ಟಿದೆ.
ಸೆಕ್ಷನ್ 89.

29. "ಒಬ್ಬ ಕದೀಂ ರೈತನ ವಿಷಯದಲ್ಲಿ" ಡೆಪ್ಯುಟಿ ಕಮ್ಮಿಷನರಿಂದ ಕಂದಾಯ ಕಮ್ಮಿಯಾ ಜಾಸ್ತೀ ಮಾಡಲ್ಪಡಬಹುದು ಯಂಬ ಸಂಗತಿ ಕುರಿತ 92ನೇ ಸೆಕ್ಷನ್‌ನಲ್ಲಿ, ಅಂಥಾ ಫೈಸಲು ಬೇಧ ಜಡ್ಜ್ರೀಯವರಿಂದ ವಪ್ಪಲ್ಪಟ್ಟು ಶಿಫಾರಸು ಮಾಡಲ್ಪಟ್ಟರೆ ಆಜ್ಞೆರಾಗಿರತಕ್ಕದ್ದೆಂತ ಬದಲಾಯಿಸಲ್ಪಟ್ಟಿರುತ್ತೆ.
ಸೆಕ್ಷನ್ 92.

30. ಮೂಲ ವರ್ಗದಾರರು ವ ಮೂಲ ಗೇಣಿದಾರರು ಇವರುಗಳ ಬಂಧುಗಳಿಗೆ ವಿಲೇವಾರಿ ಮಾಡುವದಕ್ಕೋಸ್ಕರ ಸೆಕ್ಷನ್ 93ಕ್ಕೆ ಬಂದು ಮುಖ್ಯ ನಿಯಮವು ಸೇರಿಸಲ್ಪಟ್ಟಿರುತ್ತೆ. ಸದರೀ ನಿಯಮದಿಂದಲೇ ಅದರ ಉಪಯೋಗ ಸ್ಪಷ್ಟವಾಗಿರುತ್ತೆ; ಆದರೆ ಕಮ್ಮಿಟಿಯವರು ತಿಳಿಸುವದೇನಂದರೆ ಅಂಥಾ ಸಂದರ್ಭಗಳು ಮೈಸೂರು ದೇಶದಲ್ಲಿ ನೆಲಗೊಂಡಿರುವದಾಗಿ ತಿಳಿದಿರುತ್ತಾರೆ ಮತ್ತು ಮೂಲವರ್ಗದಾರರ ಕಷ್ಟ ನಿವಾರಣೆ ಉದ್ದಿಶ್ಯ ಕಾರ್ನೂ ಮೂಲಕ ನಿಯಮಿಸುವದು ಅತ್ಯಾವಶ್ಯಕವೆಂದು ಮುಂಬೈ ಹೈ ಕೋರ್ಟಿನವರು ಸಂಪೂರ್ಣ ಅಭಿಪ್ರಾಯಪಟ್ಟಿರುತ್ತಾರೆ, (ಮುಂಬೈ ಇಂಡಿಯರ್ ಲಾ ರಿಪೋರ್ಟ್ 4, ಪ್ಯಾರಾ 473 ನೋಡತಕ್ಕದ್ದು). ಇದೇವಿಷಯದಲ್ಲಿ ವಾಯವ್ಯ ಶೀಮೆಯ 1881ನೇ ಇಸವಿ XIIನೇ ನಂಬರ್‌ವುಳ್ಳ ರೆಂಟ್ ಯಾನೆ ತೀರ್ವೆ ಆಕ್ಟಿನ 29ನೇ ಸೆಕ್ಷನ್ ಸುದಾ ನೋಡತಕ್ಕದ್ದು.
ಸೆಕ್ಷನ್ 93.

31. ಸೆಕ್ಷನ್ 101ಕ್ಕೆ ಅನೇಕ ಬದಲಾವಣೆಗಳು ಸೇರಿಸಲ್ಪಟ್ಟಿರುತ್ತೆ. ಅವುಗಳಫಲವು ಅವುಗಳಿಂದಲೇ ವ್ಯಕ್ತವಾಗುತ್ತೆ.
ಸೆಕ್ಷನ್ 101.

32. ಕಮ್ಮಿಟಿಯವರು 111ನೇ ಸೆಕ್ಷನಿನ ತರ್ವಾಯದಲ್ಲಿ ಸದರೀ VIIನೇ ಅಧ್ಯಾಯಕ್ಕೆ ಪೂರ್ತಿಯಾಗಿ ಅನ್ವಯಿಸುವ ಹಾಗೆ ಬಂದು ಸುರಕ್ಷಿತ ಕಲಮನ್ನು ಸೇರಿಸಿರುತ್ತಾರೆ.
ಸೆಕ್ಷನ್ 111.

33. ಸೆಕ್ಷನ್ 119 ಸ್ವಲ್ಪ ಮಟ್ಟಿಗೆ ಬದಲಾಯಿಸಲ್ಪಟ್ಟಿರುತ್ತೆ, ಏನಂದರೆ "ಕಾಫಿ ಸಾಗುವಳಿ ಮಾಡಲ್ಪಟ್ಟ" ಯಂಬ ಮಾತುಗಳಿಗೆ ಬದಲಾಗಿ "ಕಾಫಿ ಸಾಗುವಳಿ ಷರತ್ತಿನ ಮೇಲೆ ಪಡಕೊಂಡ" ಯುಂಬ ಮಾತುಗಳು ಇಲಾಚಿ ಸಾಗುವಳಿ ಮಾಡಲ್ಪಟ್ಟ ಜಮೀರ್ನಾಗಳಿಗೂ ಸದರೀ ಸೆಕ್ಷನಿನ ಅರ್ಥನ್ವಯ ಲಗಾವಾಗುವಂತೆ ತಿದ್ದುಪಡಿ ಮಾಡಿರುತ್ತಾರೆ.
ಸೆಕ್ಷನ್ 119.

34. ಕಮ್ಮಿಟಿಯವರು ಈ ಸೆಕ್ಷನಿನ ಮೊದಲನೇ ಉಪನಿಬಂಧನೆಯನ್ನು ವಜಾ ಮಾಡಲು ಇಷ್ಟವುಳ್ಳವರಾಗಿ ಇರುತ್ತಾರೆ, ಯಾತಕ್ಕಂದರೆ, ಇದರಿಂದ ಮೈಸೂರು ದೇಶದಲ್ಲಿ ಬಹುಕಾಲಕ್ಕೆ ಮುಂಚೆ ಉತ್ತುಮ ಕಾರಣಗಳ ಮೇಲೆ ತಳ್ಳಿ ಹಾಕಲ್ಪಟ್ಟ ಬಂದು ನಡವಳಿತವು ಕಾಯಮಾಗಿ ಜಾರೀಗೆ ತರಲ್ಪಡಲೇ ಕಾಗುವದು. ಮೈಸೂರು ದೇಶದಲ್ಲಾವರೋ ತೀರ್ವೆಯ ದರವು ತರಾಯಿಸಲ್ಪಟ್ಟ್ಸು ತರುವಾಯದಲ್ಲೇ ಅದು ಯಾವಾಗಲೂ ಜಾರೀಗೆ ತರಲ್ಪಡುವದರಿಂದಲೂ ಹಿಡುವಳಿದಾರನು ತನ್ನ ಜಮಿನನ್ನು ಇಟ್ಟುಕೊಳ್ಳತಕ್ಕದ್ದೆಯಾ ಬಿಟ್ಟುಬಿಡತಕ್ಕದ್ದೆ ಯಂಬ ವಿಷಯ ಆಲೋಚಿಸುವದಕ್ಕೆ ಕಾಲವ್ಯೆವಧಾನ ವಿಶೇಷವಿರುವದರಿಂದಲೂ ಸದರೀ ಸೆಕ್ಷನಿನ ಯರಡನೇ ಭಾಗವು ಮೈಸೂರು ದೇಶಕ್ಕೆ ಅನವಶ್ಯಕವಾಗಿರುತ್ತೆ.
ಸೆಕ್ಷನ್ 121.

35. ಪರಿಷ್ಕರಿಸಲ್ಪಟ್ಟ ಕಂದಾಯವನ್ನೇ ಕುರಿತ 124ನೇ ಸೆಕ್ಷನ್ ವಿಷಯದಲ್ಲಿ ಕಮ್ಮಿಟಿಯವರು ಅಭಿಪ್ರಾಯ ಪಡುವದೇನಂದರೆ, (b) ಮತ್ತು (c) ಕ್ಲಾಜ್‌ಗಳು ವಜಾ ಮಾಡಲ್ಪಡತಕ್ಕವು. ಮುಂಬೈ ಗವರ್ನ್‌ಮೆಂ
ಸೆಕ್ಷನ್ 124.

[redacted] ಕಾಲಕ್ಕೆ ಮುಂಚೆಯೇ ಸದರೀ ಕ್ಲಾಜ್‌ಗಳನ್ನು ಮುಂಬೈ ಲ್ಯಾಂಡ್ [redacted] ಷನ್ನಿಂದ ವಜಾ ಮಾಡಲುದ್ದೇಶ್ಯವಾದ ಬಂದು ರೆಜೊ

ಲ್ಯೂಷ್ ಫಾಯಿಷ್ಮಾಡಲ್ಪಟ್ಟಿರುತ್ತೆ. ಕಮ್ಮಿಟಿಯವರು (c) ಕ್ಲಾಜನ್ನು ವಜಾ ಮಾಡಲು ನಿಸ್ಸಂದೇಹವಾಗಿ ಅಭಿಪ್ರಾಯಪಡುತ್ತಾರೆ; ಆದರೆ (b) ಕ್ಲಾಜ್ ವಿಷಯದಲ್ಲಿ ಅದನ್ನು ವಜಾ ಮಾಡುವದಕ್ಕೆ ಮೆಂಬರುಗಳು ಯೇಕವಾಕ್ಯತೆವುಳ್ಳವರಾಗಿ ಇದ್ದಾಗ್ಯೂ ಅವರುಗಳಿಗೆ ವುಂಟಾಗಿರುವ ಕಾರಣಗಳು ಪ್ರತ್ಯೇಕವಾಗಿರುತ್ತೆ, ಆ ಪೈಕೀ ಇಬ್ಬರು ಮೆಂಬರುಗಳು ಅಂಥಾ ತಮ್ಮ ಅಭಿಪ್ರಾಯಕ್ಕೆ ನ್ಯಾಯಸಂಮತವಾಗಿರುವಣವೇ ಕಾರಣವೆಂತಲೂ ಮೂರನೇಯವರು ಬಂದು ಗೊತ್ತಾದ ಸಂಗತಿಯಲ್ಲಿ ಪೂರ್ತಿಯಾಗಿ ಅನುಕೂಲ ಉಂಟಾಗತಕ್ಕ ಮತ್ತು ರಿಯಾಯಿತಿ ತೋರಿಸತಕ್ಕಂಥಾ ಅಂಶವೇ ಕಾರಣವೆಂತಲೂ ಇರಾದಿಸುತ್ತಾರೆ.

ಸೆಕ್ಷನ್ 141.

36. ಈ ಸೆಕ್ಷನಿನಲ್ಲಿ ಯಲ್ಲೀ ಗುರ್ತುಗಳನ್ನು ಕೆಡಿಸುವ ವ್ಯೊಕದ್ದಮೆಗಳಲ್ಲಿ ಫ್ಲೂಟಿ ವಿಚಾರಣೆ ಮಾಡುವ ಆಫೀಸರ್‌ಗಳು ಡೆಪ್ಯೂಟಿ ಕಮ್ಮಿಷನರು ಮತ್ತು ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್- ದರ್ಜೆಗಿ ಕಮ್ಮಿ ಅಲ್ಲದ ಸರ್ವೆ ಆಫೀಸರ್‌ಗಳೆಂದು ಹದ್ದುಪಡಿಸಲ್ಪಟ್ಟಿದೆ, ಪರಂತು ಸದರೀ ಸೆಕ್ಷನಿನ 5ನೇ ಪಬ್ಲಿಯಲ್ಲಿ "ಭಿನ್ನಪಡಿಸುವ" ಯೆಂಬ ಮಾತಿನ ತರುವಾಯ "ಅಥವಾ ಬಗರ್ ಹುಕ್ಕುಂಯಲ್ಲೆ ಗುರುತನ್ನು ಹಾಕುವ" ಯೆಂಬ ಮಾತುಗಳು ಅಂಥಾ ಬಂದು ಸಂಗತಿ ವಾಸ್ತವ್ಯವಾಗಿ ನಡೆದಿರುವ ಪ್ರಯುಕ್ತ ಕೇರಿಸಲ್ಪಟ್ಟಿರುತ್ತೆ.

Xನೇ ಅಧ್ಯಾಯ.

(ಗ್ರಾಮಗಳ, ಷಹರ್‌ಗಳ ವ ಪಟ್ಟಣಗಳ ನಿವೇಶನಗಳೊಳಗಣ ಜಮೀನುಗಳನ್ನು ಕುರಿತು.)

37. ಈ ಅಧ್ಯಾಯವು 1868ನೇ ಇಸವಿ IVನೇ ನಂಬರ್ ಬಾಂಬೆ ಆಕ್ಟನುಸರಿಸಿ ವಿಶೇಷವಾಗಿ ಬದಲಾಯಿಸಿ ಬರೆಯಲ್ಪಟ್ಟಿದೆ. ಅದನ್ನನುಸರಿಸಿ ತಿಳಿಸಬೇಕಾದ್ದೇನಂದರೆ ಯಾವದೊಂದು ಷಹರಿನ ವೋಜಣೆಯಾಗಲೀ ವಿಚಾರಣೆಯಾಗಲೀ ಮೈಸೂರು ದೇಶದಲ್ಲಿ ಇದುವರಿಗೆ ನಡಿಸಲ್ಪಟ್ಟಿರುವದಿಲ್ಲ. ಷಹರ್‌ಗಳ ವೋಜಣಿ ಕೆಲಸ ನಡಿಸಬೇಕೆಂಬವದು ಇನ್ನೂ ಮುಂದಿನ ಕಾಲದ ಪ್ರಶ್ನೆಯಾಗಿರುತ್ತೆ. ಸದರೀ ಅಧ್ಯಾಯವು ಹಾಲೀ ಬದಲಾಯಿಸಲ್ಪಟ್ಟು ತಿದ್ದುಪಡಿಮಾಡಿದ ಪ್ರಕಾರ ಷಹರ್ ವೋಜಣಿ ಮತ್ತು ವಿಚಾರಣೆಯು ಗವರ್ನಮೆಂಟಿನವರು ಯುಕ್ತವೆಂದೆಣಿಸಿದಾಗ ನಡಿಸಲ್ಪಡುವದಕ್ಕೂ ಮತ್ತು ಸದರೀ ಕೆಲಸಗಳನ್ನು ಕೈಮುಪಡಿಸುವದಕ್ಕೂ ಅವಕಾಶವನ್ನುಂಟು ಮಾಡುತ್ತದೆ. ಪುರಾತನ ಹಕ್ಕುದಾರಿ ಪಡೆಯುವ ಬಗ್ಗೆ ಸ್ವಾಧೀನತೆಯ ಕಾಲಕ್ಕೆ ಗೊತ್ತು ಮಾಡಿರುವ ಐದು ವರುಷಗಳ ವಾಯಿದೆಯು ಕೇವಲ ಜಾಸ್ತೀ ಕಾಲವೆಂದು ಕಮ್ಮಿಟಿಯವರು ಅಭಿಪ್ರಾಯಪಡುವದಿಲ್ಲ.

XIನೇ ಅಧ್ಯಾಯ.

(ಜಮ್ಮಾ ಕಂದಾಯ ವ ಇತರ ರೆವಿನ್ಯೂ ಬಾಕಿಗಳನ್ನು ವಸೂಲ್ ಮಾಡುವದನ್ನು ಕುರಿತು.)

ಸೆಕ್ಷನ್ 158.

38. ಕೆಟ್ಟು ಹೋಗತಕ್ಕ ಪದಾರ್ಥಗಳನ್ನು ಕೂಡ್ಲೆ ವಿಕ್ರಯಿಸುವ ಬಗ್ಗೆ 158ನೇ ಸೆಕ್ಷನಿಗೆ ಬಂದು ನಿಯಮವು ಕೇರಿಸಲ್ಪಟ್ಟಿರುತ್ತೆ.

ಸೆಕ್ಷನ್ 172.

39. ಸೆಕ್ಷನ್ 172ರ ಮತಲಬು ವಿಶೇಷವಾಗಿಯೂ ಅದರ ಅರ್ಥ ಪೂರ್ತಿಯಾಗಿಯೂ ಬದಲಾಯಿಸಲ್ಪಟ್ಟಿರುತ್ತೆ. ಹೀಗೆ ಬದಲಾಯಿಸಲ್ಪಟ್ಟ ಸ್ಥಿತಿಯಲ್ಲಿ ಸದರೀ ಸೆಕ್ಷನಿಗೆ ಕಮ್ಮಿಟಿಯ ಪೈಕೀ ಇಬ್ಬರೇ ಜವಾಬ್ದಾರರಾಗಿರುತ್ತಾರೆ, ಖೈದುಮಾಡುವ ಕಲಂ ಕುರಿತು ಯಲ್ಲರೂ ತಿಳಿದು ಮೈಸೂರು ದೇಶದಲ್ಲಿ ಆಗಲೀ ಪ್ರಸ್ತುತ ನಡಿಯುವದರಿಂದ, ಮೆ॥ ಕೃಷ್ಣರಾಯರು ಷುರುಲಾಗಾಯತು ಸದರೀ ಕಲಮು ಯಾವ ರೀತಿಯಲ್ಲಾಗಲಿ ಇಡಲ್ಪಡುವದಕ್ಕೆ ಹಟುತ್ತಾಗಿ ಅಕ್ಷೇಪಿಸುತ್ತಾರೆ. ಈ ಅಭಿಪ್ರಾಯವು, ಆಲೋಚಿಸಲ್ಪಟ್ಟ ಸ್ವಲ್ಪಹೆಚ್ಚುಕಡಿಮೆ ತಮ್ಮಂಥಳಿದೇಶದ ಮತ್ತು ಇತರ ಆಫೀಸರ್‌ಗಳೂ ಪಪ್ಪಿ ಇರುತ್ತಾರೆ, ಅಂದರೆ ಮೈಸೂರೆ ಕೋಡಿನಲ್ಲಿ ಈಗ ಇರತಕ್ಕ ಸೆಕ್ಷನಿಗೆ ಅಕ್ಷೇಪಿಸುವಷ್ಟರ ಮಟ್ಟಿಗೆ. ಮುಂಬೈ ಲ್ಯಾಂಡ್ ರೆವಿನ್ಯು ಕೋಡು ಜಾರೀಗೆ ಬಂದ ಲಾಗಾಯತು ಸದರೀ ವೈಸಿರ್ಡೆಸಿಯ ದಕ್ಷಿಣಡಿವೀಜನ್ನಿನಲ್ಲಿ ಸದರೀ ಸೆಕ್ಷನು ಬಂದು ಸಲವಾದರೂ ಯಂದಿಗೂ ಜಾರಿಗೆ ತರಲ್ಪಡಲ್ಲವೆಂದು ಕಮ್ಮಿಟಿಯವರು ವರ್ತಮಾನ ಪಡೆದಿರುತ್ತಾರೆ. ಆದಕಾರಣ ಕಮ್ಮಿಟಿಯ ಪೈಕಿ ಇಬ್ಬರು ಮೆಂಬರುಗಳೇ ಈ ಅಭಿಪ್ರಾಯವುಳ್ಳವರೆಂತ ಭಾವಿಸಿದಾಗ್ಯೂ, ಸದರೀ ಸೆಕ್ಷನ್ನು ಈಗ ಇರುವಂತೆ, ಕಂದಾಯ ಕೊಡುವದಕ್ಕೆ ಮನಃಪೂರ್ವಕ ತಪ್ಪುವಂಥಾ ಯಾ ವೊಸಗೊಳಿಸುವಂಥಾ ಬಾಕೀದಾರರಿಗೆ ಮಾತ್ರ ಅಲ್ಲದೆ ಅನ್ಯರಿಗೂ ಅನ್ವಯಿಸುವದಾದರೆ ಅದು ನಿಷ್ಪ್ರಯೋಜನವಾಗಿರುವದು. ಕಂದಾಯ ವಸೂಲಿ [illegible] ಇತರ ಮಾರ್ಗಗಳು ನಿಷ್ಫಲವಾದಾಗಲೇ ಸದರೀ ಸೆಕ್ಷನಿನ ಅಧಿಕಾರವನ್ನು ಪ್ರಾಮಾಣಿಕನಾದ ಒಬ್ಬ ಬಾಕೀದಾ[illegible] ಅಸಂಗತವಾಗಿರುವದು.

ರೀ ಸೆಕ್ಷನಿನಿಂದ ಉಂಟುಮಾಡಲ್ಪಟ್ಟ ಅಧಿಕಾರ ಮುಂಬೈಯಲ್ಲಿ ಉಪಯೋಗಿಸಲ್ಪಡಲಿಲ್ಲವೆಂಬುವದೇ ಅದರಿಂದ ಉಪಯೋಗ
ದಕ್ಕೂ, ಅದು ಪೂರ್ತಿಯಾಗಿ ಬಿಡಲ್ಪಡತಕ್ಕದ್ದೆಂಬುವದಕ್ಕೂ ನಿದರ್ಶನ ವಲ್ಲವು ; ಸದರೀ ಸೆಕ್ಷನನ್ನು ಯಾವತರಹೇ ಬಾಕೀದಾ
ರ್ತರ ಈಗ ಕಾಯಂ ಮಾಡಬೇಕೆಂತ ಉದ್ದೇಶಿಸಲ್ಪಟ್ಟಿಧೆಯೋ ಅಂಥಾವರುಕೂಡಾ ಸದರೀ ಅಧಿಕಾರ ವಿರಬಹುದೆಂತ ತಿಳಿದೇ ಹಿಂ
ರ ಬಹುದು.

ಪ್ರಾಯಶಃ ಯಿಂಡ್ಯ ದೇಶದ ಯಲ್ಲ ಠೀಮೆಗಳಲ್ಲೂ ಅಂಥಾ ಖೈದ್ ಮಾಡುವ ಅಧಿಕಾರ ವಿಧಿಸಲ್ಪಟ್ಟಿರುತ್ತೆ, ಪಂಜಾಬ್ ದೇಶದಲ್ಲಿ
ವಸೂಲೀಬಗ್ಯೆ ಯಿದೇ ಪುರು ನಡವಳಿತವಾಗಿ ವಿಧ್ಯಿಸಲ್ಪಟ್ಟಿಧೆ. ಸದರೀ ಸೆಕ್ಷನು
ಸೆಕ್ಷನ್ 179. ಈಗ ಬದಲಾಯಿಸಲ್ಪಟ್ಟ ಪ್ರಕಾರ ಮದರಾಸ್ ಕೋಡಿನಿಂದ ತೆಗದುಕೊಳ್ಳಲ್ಪಟ್ಟಿಧೆ.
ಕಮ್ಮಿಟಿಯ ಪೈಕೀ ಒಬ್ಬರು, ಅದು ಯಾವೆ ರೂಪದಲ್ಲಿ ಕಾಯಂ ಮಾಡಲ್ಪಟ್ಟಾಗ್ಯೂ
ಕೆಡಕಿಗೆ ಬಹುಶಃ ಅವಕಾಶವಾಗುವದೆಂದು ಯೋಚಿಸುತ್ತಾರೆ. ಕಮ್ಮಿಟಿಯ ಪೈಕೀ ಮತ್ತಿಬ್ಬರು ಅಭಿಪ್ರಾಯ ಪಡುವದೇನೆಂದರೆ, ಸರ್ಕಾ
ರದ ಮತ್ತು ಜನಗಳ ಆದಾಯಗಳ ಸಂರಕ್ಷಣೇಗೋಸ್ಕರ ಅವಲಂಬಿಸಬೇಕಾದ ಇತರ ಅನೇಕ ನಡವಳಿತಗಳಿಗಿಂತಲೂ ಇದರಿಂದ ಹೆಚ್ಚು
ಕೆಡಕು ಪ್ರಾಯಶಃ ಉಂಟಾಗಲಾರದೆಂತಲೂ, ಬಾಕೀದಾರನು 179ನೇ ಸೆಕ್ಷನ್ ಅನುಸರಿಸಿ ನಡವಳಿತಗಳನ್ನು ಯಾವಾಗಲಾಗಲೀ ಅವು
ಈ ರಗ್ಯುಲೇಷನ್ ಸಂಬಂಧಿಸಿರುವಷ್ಟರ ಮಟ್ಟಿಗೆ ಮನ್ನಾ ಮಾಡಿಸಿಕೊಳ್ಳಬಹುದೆಂತಲೂ ಯೋಚಿಸುತ್ತಾರೆ. ಈ ಪ್ರಶ್ನೆಯನ್ನು ಪರ
ಪಕ್ಷವಾಗಿ ಆಲೋಚಿಸಿದರೆ, ಸ್ವಂತ ಬಾಕೀದಾರ್ಯಾಗಿ ಖೈದು ಮಾಡುವೆಣವು ಸಾಧ್ಯವಾದ ಮಟ್ಟಿಗೂ ಜಾಗ್ರತೆಯಾಗಿ ಮಾಕೂಫ್ ಆಗಬ
ಹುದಾದದರಿಂದ ಸರ್ಕಾರದ ಬಾಕೀದಾರ್ಸ್ತರ ಈ ನಿಬಂಧನೆಯು ವಿಧಿಸುವದು ಕೇವಲ ಅಕಾಲವೆಂಬದಾಗಿಯೂ ಹೇಳಲ್ಪಡಬಹುದು.

172ನೇ ಸೆಕ್ಷನಿನ 2ನೇ ನಿಯಮದ ಕಲಮಿನಲ್ಲಿ ಹೆಂಗಸರುಗಳನ್ನು ದಸ್ತಗಿರಿ ಮಾಡುವದು ನಿಷೇಧಿಸುವದನ್ನು ಹೊಸದಾಗಿ
ಸೆಕ್ಷನ್ 172. ವಿಧಿಸಲ್ಪಟ್ಟಿರುತ್ತೆ.

40. ಕಮ್ಮಿಟಿಯವರು, ಸಲಹೆ ಕೇಳಲ್ಪಟ್ಟ ಪ್ರಾಯಶಃ ಯೆಲ್ಲ ಆಫೀಸರುಗಳ ಅಂಗೀಕಾರದೊಡನೆ, 177ನೇ ಸೆಕ್ಷನಿನ
ಸೆಕ್ಷನ್ 177. 4ನೇ ಪ್ಯಾರಾವನ್ನು ಟು ಮಾಡಿ, ಅದರಿಂದ ಗ್ರಾಮದ ಮುಖ್ಯ ಹಿಡುವಳೀದಾರನಿಗೆಗಾ
ಮವು ಜಪ್ತಿಯಿಂದ ಬಿಡುಗಡೆ ಮಾಡಲ್ಪಟ್ಟಾಗ ಗ್ರಾಮದ ಉತ್ಪತ್ತಿಯ ಪೈಕೀ ತಮಾಂ
ಸರ್ಪ್ಲಸ್ ಯಾನೆ ಸಪಾವತೀ ಶಿಲ್ಕು ಮೊಬಲಗನ್ನೂ ಕೊಟ್ಟು ಬಿಡುವದಕ್ಕೆ ವಿಧಿಸಿರುತ್ತಾರೆ.

41. ಮೇಲ್ಕಂಡ ಪ್ರಕಾರವೇ ಅಂಗೀಕರಿಸಲ್ಪಟ್ಟ ಕಮ್ಮಿಟಿಯವರು, ಸ್ವತು ಹರಾಜಿನಲ್ಲಿ ಬಿಡಲ್ಪಡುವದಕ್ಕೆ ಮುಂಜೆ ಯಾವ
ಸೆಕ್ಷನ್ 184. ಕಾಲದಲ್ಲಾಗಲೀ ಕಂದಾಯ ಕೊಡಲಿಕ್ಕೆ ತಪ್ಪಿದ ಮನುಷ್ಯನು ಬಾಕೀಯನ್ನು ಪಾವತಿ
ಮಾಡಿದರೂ ಅಥವಾ 179ನೇ ಸೆಕ್ಷನನುಸರಿಸಿ ಜಾಮೀರ್ ಕೊಟ್ಟರೂ ವಿಕಯ
ವು ನಿಲ್ಲಿಸುವ ಬಗ್ಯೆ 184ನೇ ಸೆಕ್ಷನಿನಲ್ಲಿ ವಿಧಿಸಿರುತ್ತಾರೆ.

42. ಸೆಕ್ಷನ್ 192ರಲ್ಲಿ, ಪುನರ್ವಿಕ್ರಯದ ಬಗ್ಯೆ ಕೊಡಬೇಕಾದ ನೋಟೀಸು ಅಂಥಾ ಪುನರ್ವಿಕ್ರಯವು ಅಸಲ್ ವಿಕ್ರಯಕ್ಕೆ
ಸೆಕ್ಷನ್ 192. ಗೊತ್ತು ಮಾಡಿದ ತಾರೀಖಿನ ಏಳು ದಿವಸಗಳೊಳಗಾಗಿ ನಡಿಸಲ್ಪಟ್ಟರೆ ಅನಾವಶ್ಯ
ಕವೆಂದು ಮಾಡಲ್ಪಟ್ಟಿರುತ್ತೆ. ಇದರಿಂದ ಅನಾವಶ್ಯಕವಾದ ಜಾಸ್ತೀ ಕೆಲಸಗಳು
ಕೂಡಿ ಬರುವದೆಂದು ಕಮ್ಮಿಟಿಯವರು ಅಭಿಪ್ರಾಯ ಪಟ್ಟಿರುತ್ತಾರೆ.

XIVನೇ ಅಧ್ಯಾಯ.

(ರೆವಿನ್ಯು ಅಧಿಕಾರ.)

43. ಸೆಕ್ಷನ್ 230ರಲ್ಲಿ ಹೇಳುವ ಕೆಲವು ವ್ಯಾಜ್ಯಗಳ ನಿರ್ಬಂಧ ಮತ್ತು ಮುಖ್ಯವಾಗಿ (*i*) ಗುರ್ತುಳ್ಳ ನಿಯಮ ಮತ್ತು ಅದ
ರ ವಿವರಣೆ ವಿಷಯದಲ್ಲಿ ಕಾರ್ಯ ಮಾಡುವದು ಕೇವಲ ಕಷ್ಟವಾದ್ದಾಗಿಧೆ. ಆದರೆ
ಸೆಕ್ಷನ್ 230. ಕಮ್ಮಿಟಿಯವರು, ಸದರೀ ಸೆಕ್ಷನನ್ನು ಅದು ಈಗ ಯಿರುವಂತೆಯೆ ಪರಂತು ಈಗ
ಮಸೂದೆ ಕೋಡಿನಲ್ಲಿ ಬಿಡಲ್ಪಟ್ಟಿರುವ ಮುಂಬೈ ಜ್ಯೂರಿಸ್ ಡಿಕ್ಷನ್ ಆಕ್ಟಿನ ಯಿದ್ದೇ ವಿಷ
ಯಕವಾದ ಸೆಕ್ಷನಿನ ವಿವರಣೆಯೊಡನೆ ವಪ್ಪುತ್ತಾರೆ. (*j*) ಕಲಮು ಬದಲಾಯಿಸಲ್ಪಟ್ಟಿರುತ್ತೆ. "ಗವರ್ನಮೆಂಟಿನಿಂದಾಗಲೀ ಗವರ್ನಮೆಂ
ಟಿನ ಅಪ್ಪಣೆ ಮೇರೆ ಯಾಗಲೀ ಕೊಡಲ್ಪಟ್ಟ ಬಂದು ದಸ್ತಾವೇಜು ಅಥವಾ ಸನ್ನದು" ಯಂಬ ಅರ್ಥ ವಿವರಣೆಯು ಕೇವಲ ಅಸ್ಪಷ್ಟವಾ
ಗಿ ಯಿಧೆ, ಮತ್ತು ಅದು ಮುಂಬೈ ಜ್ಯೂರಿಸ್ಡಿಕ್ಷನ್ ಆಕ್ಟಿನಲ್ಲಿರುವಂತೆ ಸಂಪೂರ್ಣವಾಗಿ ತೆಗದುಕೊಂಡಿಲ್ಲ. ಕಮ್ಮಿಟಿಯವರು ಅದಕ್ಕೆ

ಬದಲಾಗಿ "ಅಂಥಾ ವಿನಾಯಿತಿಯನ್ನು ಕಂಡೋಕ್ತವಾಗಿ ಉಂಟು ಮಾಡುವ ಯಾ ದೃಢಪಡಿಸುವ 1832ನೇ ಇಸವಿಗೆ ತರ
ಮೈಸೂರು ಗವರ್ನ್‌ಮೆಂಟಿನವರಿಂದ ಕೊಡಲ್ಪಟ್ಟ ಬರವಣಿಗೆಯಲ್ಲಿರುವ ಯಾವದಾದರೂ ಇತರ ಗ್ರ್ಯಾಂಟು" ಯೆಂಬ ಮಾತುಗಳ
ಸುವದು ಉತ್ತಮವೆಂದು ಭಾವಿಸುತ್ತಾರೆ. VIIನೇ ಅಧ್ಯಾಯಕ್ಕೆ ಕೇರಿಸಲ್ಪಟ್ಟ ಸುರಕ್ಷಿತ ಕಲಮಿನಿಂದಲೂ, 92 ವ 101ನೇ
ಗಳಲ್ಲಿ ಮಾಡಲ್ಪಟ್ಟ ಬದಲಾವಣೆಗಳಿಂದಲೂ, (*f*) ಕಲಮು ಬಿಡಲ್ಪಟ್ಟಿರುತ್ತೆ.

44. 231 ನೇ ಸೆಕ್ಷನಿನ (*a*) ಕಲಮು ಇಂಥಾ ಸಾನೂನಿನಲ್ಲಿ ಕೇರಿಸಲ್ಪಡಕೂಡದೆಂದು ಕಮ್ಮಿಟಿಯವರು ಅಭಿಪ್ರಾಯ
ತಳ್ಳುಪಡಿಮಾಡಿರುತ್ತಾರೆ. (*a*) ಕ್ಲಾಜಿನಲ್ಲಿ ವುದಹರಿಸಲ್ಪಟ್ಟಿರುವ ಸಂಗತಿಗಳ ವಿಷಯದಲ್ಲಿ ತಮಗೆ ತಿಳಿಯಬಂದ ಕೂಡ್ಲೆ ಅನೇಕ ಸಂದರ್ಭ
ಳಲ್ಲಿ ರೆವಿನ್ಯೂ ಇಲಾಖೆಯವರು ಪರಿಹಾರವನ್ನು ವುಂಟುಮಾಡುತ್ತಾರೆ. ಒಂದು ವ್ಯಾಳೆ ನಷ್ಟ ಹೊಂದಿದವನಿಗೆ ಪರಿಹಾರವು ವುಂ
ಗದೇ ಇದ್ದರೆ ಆಗ್ಯೆ ನುಕ್ಸಾನಪಟ್ಟವನು ಕೋರ್ಟಿಗೆ ಹೋಗಬಹುದು. ಸದರೀ ಕ್ಲಾಜನ್ನ ಇಟ್ಟರೆ ರೆವಿನ್ಯೂ ಇಲಾಖೆಯವರನ್ನ ತಿರಸ್ಕರಿಸಿ
ಲವ್ವಾಳೆ ಬಹುಶಃ ಗವರ್ನ್‌ಮೆಂಟ್ ಆಫೀಸರಗಳಿಗೆ ತೊಂದರೆ ಪಡಿಸುವ ಅಥವಾ ಕೆಡಕುಉಂಟುಮಾಡುವ ತಾತ್ಪರ್ಯದಿಂದ ಪ್ರತಿ ಜುಜವಿ
ಮೊಕದ್ದಮೆಯನ್ನೂ ಸಿವಿಲ್ ಕೋರ್ಟುಗಳಿಗೆ ತೆಗದುಕೊಂಡು ಹೋಗುವದಕ್ಕೆ ರೈತರಿಗೆ ಪ್ರೋತ್ಸಾಹಪಡಿಸಿದಂತೆ ಆಗುತ್ತೆ.

ಮೇಲೆ ಮತ್ತು ಹಿಂದಿನವ್ಯಾರಾದಲ್ಲಿ ಹೇಳಲ್ಪಟ್ಟ ಕಾರಣಗಳಿಗೋಸ್ಕರ 231ನೇ ಸೆಕ್ಷನ್ ವಿಷ್ಯವೂ ತಳ್ಳುಪಡಿಮಾಡತಕ್ಕ
ಸೆಕ್ಷನ್ 231. ದ್ದೆಂದು ಸಲಹೆ ಕೊಡಲ್ಪಟ್ಟಿದೆ.

ಒಟ್ಟು ವಿಷಯ.

45. ಮುಂಜೈ ಹಕ್ಕುದಾರಿ ವುದ್ಯೋಗಗಳ ಆಕ್ಟಿನ ಅನೇಕ ಭಾಗವನ್ನು ಈ ರೆಗ್ಯುಲೇಷನಿಗೆ ಕೇರಿಸತಕ್ಕದ್ದೆಂದು ಕಮ್ಮಿ
ಟಿಯವರು ಬಂದುಕಾಲದಲ್ಲಿ ಅಭಿಪ್ರಾಯಪಟ್ಟರು; ಆದರೆ ವಿಶೇಷ ಸಾವಕಾಶವಿಲ್ಲದೆ ಈ ರೆಗ್ಯುಲೇಷನ್ ಜಾರೀಗೆ ತರುವೆದು ಯುಕ್ತ
ವೆಂದು ಭಾವಿಸಿರುವದಲ್ಲದೆ ಸದರೀ ಹಕ್ಕುದಾರಿ ವುದ್ಯೋಗಗಳ ಆಕ್ಟನ್ನ ಶೃದ್ಧೆಯಿಂದ ಅವಗಾಹನ ಮಾಡಿಕೊಳ್ಳಬೇಕಾದ್ದರಿಂದ ಅದನ್ನು
ಮುಂದಕ್ಕೆ ಪ್ರತ್ಯೇಕ ಆಕ್ಟಾಗಿ ಜಾರೀಗೆ ತರಬೇಕೆಂದು ಸಲಹೆ ಕೊಡಲೂ, ಕಮ್ಮಿಟಿಯವರು ನಿಶ್ಚಯಿಸಿರುತ್ತಾರೆ.

ಮೈಸೂರು,
ತಾರೀಖು 4ನೇ ಆಗಸ್ಟ್ 1884.

ಪಿ. ಕೃಷ್ಣರಾವ್.
ಜೆ. ಪಿ. ಗ್ರ್ಯಾಂಟ್.
ವೀ. ಪಿ. ಮಾಧವರಾವ್.

Mysore Government Press, Bangalore.—1884.